ಮಾಡಕೂಡದು ಎಂದು ಹೇಳಿದಾಗ ಅವರು ನಾವು ತಹಶೀಲ್ದಾರರಿಂದ ಸಾಗುವಳಿ ಚೀಟಿಯನ್ನು ತಂದಿದ್ದೇವೆ ಎಂದು ಹೇಳಿದರೂ ಕೂಡ ಅದಕ್ಕೆ ಅವರು ಒಪ್ಪದೆ ತಹಶೀಲ್ದಾರರು 50 ರೂಪಾಯಿಗಳನ್ನು ಕೊಟ್ಟರೆ ಸಾಗುವಳಿ ಚೀಟಿ ಕೊಡುತ್ತಾರೆ ಎಂದು ಹೇಳಿ ಆ ಬಡವರಿಗೆ ಆ ಭೂಮಿಯನ್ನು ಉಳುವುದಕ್ಕೆ ತೊಂದರೆ ಕೊಟ್ಟಿದ್ದಾರೆ. ಅಮೃತಮಹಲ್ ಕಾವಲಿನಲ್ಲಿ ಈಚಲು ಮರಗಳು ಏನಿವೆ ಆ ಜಮೀನನ್ನು ಉಳಿಸಿಕೊಂಡು ಬಾಕಿ ಜಮೀನನ್ನು ಬಡ ಜನಗಳಿಗೆ ಹಂಚಿದ್ದಾರೆ. ಅದು ವ್ಯವಸಾಯಕ್ಕೆ ಯೋಗ್ಯವಾದ ಜಮೀನು. ಆ ಜಮೀನನ್ನು ಅವರಿಗೆ ಸಾಗುವಳಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. 10 ಸಾರಿ ಅರ್ಜಿಗಳನ್ನು ಕೊಟ್ಟಿದ್ದೇವೆ. ಆದರೂ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ? ಇದಕ್ಕೆ ಜವಾಬ್ದಾರರು ಯಾರು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾಲ್ಲೂಕು ಲೆವಲ್ ಕಮಿಟಿಯಲ್ಲಿ ಸಾಮಾನ್ಯವಾಗಿ ಜಿಲ್ಲಾ ಮಟ್ಟದ ಎಕ್ಸೈಸ್ ಆಫೀಸರ್ ಇರತಕ್ಕಂತಹ ಪದ್ಧತಿ ಇಲ್ಲ. ಅವರು ಆ ಸಮಯದಲ್ಲಿ ಹೇಗೆ ಮಾಡಿದ್ದಾರೆಂಬುದನ್ನು ವರದಿ ತರಿಸಿಕೊಂಡು ಹೇಳಬೇಕಾಗಿದೆ. ಅದೂ ಅಲ್ಲದೆ ಅವರು ತಹಸೀಲ್ದಾರ್‌ರವರು 50 ರೂಪಾಯಿ ಕೊಟ್ಟರೆ ಕೊಡುವರು ಎಂದು ಕೂಡ ಹೇಳುತ್ತಿದ್ದಾರೆ. ಆದ್ದರಿಂದ ಇದರಲ್ಲಿ ಎಷ್ಟು ಸತ್ಯಾಂಶ ಇದೆಯೆಂಬುದನ್ನು ನೋಡಬೇಕು. ಅದನ್ನು ವಿಚಾರಿಸುತ್ತೇನೆ. ಆ ಜಮೀನಿನಲ್ಲಿ ಡೇಟ್ ಟ್ರೀ ಬೆಳೆಸುವುದಕ್ಕೆ ರಿಸರ್ವ್ ಮಾಡಿದ್ದರೆ, ಅದನ್ನು ಉಳಿಸಿಕೊಂಡು ಪಕ್ಕದ ಜಮೀನು ಕೊಡುವುದಕ್ಕೆ ವರದಿ ತರಿಸಿಕೊಂಡು ತೀರ್ಮಾನ ಮಾಡಬೇಕಾಗುತ್ತದೆ. ನಾನು ಹಿಂದಿನ ಗಮನ ಸೆಳೆಯುವ ಸೂಚನೆ ಬಗ್ಗೆ ಒಂದು ವಿಷಯವನ್ನು ಇಲ್ಲಿ ಹೇಳುತ್ತೇನೆ. ಅದರಲ್ಲಿ ಇನ್ನಿಬ್ಬರು ತಪ್ಪಿಸಿಕೊಂಡು ಹೋಗಿದ್ದಾರೆ ಎನ್ನುವ ವಿಷಯ ಹೇಳಿತ್ತು. ಈಗ ಅವರಿಬ್ಬರನ್ನು ಕೂಡ ಅರೆಸ್ಟ್ ಮಾಡಿದ್ದೇವೆ. ಅವರು ಪೋಲೀಸ್ ಕಸ್ಟಡಿಯಲ್ಲಿದ್ದಾರೆ.

Statement of the Minister for Education

re : *Admission of Students in Government College, Kolar*

Sri C. BYRE GOWDA (Vemgal).—I request the Hon. Minister for Education to make a statement regarding admission of students in Government College, Kolar.

Sri A. R. BADARINARAYANA (Minister for Education).—In regard to the matter raised by the hon. member regarding admission to the Kolar College, I got in touch with the Principal and have instructed him to see most of the boys are admitted. Now I have received report to the effect that everyone of them has been admitted and there is no trouble. Apart from this, the question of starting a Junior College for Kolar Town is under active consideration of the Government and I hope orders will be issued shortly.

Sri C. BYRE GOWDA.—Will that be Government Junior College ?

Sri A. R. BADARINARAYANA.—Yes, yes.

Notice of adjournment motion re : *Purch sing the three Palaces belonging to the former Maharaja of Mysore*

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಈಗ ಊಟಿ, ಬೆಂಗಳೂರು ಮತ್ತು ಮೈಸೂರು ಅರಮನೆಗಳನ್ನು ಖರೀದಿ ಮಾಡತಕ್ಕ ವಿಷಯದಲ್ಲಿ ಮತ್ತು ಅದರ ಬಗ್ಗೆ 30–40 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ವಿಷಯದಲ್ಲಿ ನಾನು ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೆ. ಅದಕ್ಕೆ ಮುಂಚೆ ಗಮನ ಸೆಳೆಯುವ ಒಂದು ಸೂಚನೆಯನ್ನು ಸಹ ಕಳಿಸಿದ್ದೆ. ಅದಕ್ಕೆ ಕೂಡ

(ಶ್ರೀ ಎಸ್. ಬಂಗಾರಪ್ಪ)

ಸರ್ಕಾರದಿಂದ ಯಾವ ಉತ್ತರವೂ ಬಂದಿಲ್ಲ. ಜೊತೆಗೆ ಮೂರು ಅರಮನೆಗಳನ್ನು ಖರೀದಿ ಮಾಡುವ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಅದನ್ನು ಮಾರಬಹುದು ; ಅದು ಅವರವರಿಗೆ ಸೇರಿರತಕ್ಕಂತಹ ವಿಚಾರ ಎಂದು ಹೇಳಿದ್ದಾರೆಂದು ಮುಖ್ಯಮಂತ್ರಿಯವರು ಸಹ ಹೇಳಿದ್ದಾರೆ. ಅದರ ಜೊತೆಗೆ ಮೊನ್ನೆ ಒಂದು ಹೇಳಿಕೆಕೊಟ್ಟು ಈ ವಿಷಯವನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗುತ್ತದೆ ಎಂದು ಹೇಳಿದ್ದಾರೆ. ನಾನಾದರೂ ಹೇಳುವುದೇನೆಂದರೆ, ಈ ಸೊತ್ತು ಜನತೆಯ ಸೊತ್ತು. ಜನತೆಯ ಸೊತ್ತು ಇದು ಆಗಿರುವುದರಿಂದ ಇದನ್ನು ಮಾರತಕ್ಕಂತಹ ಅಧಿಕಾರ ರಾಜರಿಗೆ ಇಲ್ಲ.

ಅಧ್ಯಕ್ಷರು.—ಅದರ ಬಗ್ಗೆ ನಾನು ತಮಗೆ ಬರೆದು ಕಳುಹಿಸಿದ್ದೇನೆ. ಪುನಃ ತಾವು ಅದರ ಬಗ್ಗೆ ಭಾಷಣವೇ ಶುರು ಮಾಡಿದ್ದೀರಲ್ಲ! ನಾನು ಅಪ್ಪಣೆ ಕೊಟ್ಟ ಮೇಲೆ ತಾವು ಮಾತನಾಡತಕ್ಕದ್ದು.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ಇದರ ಬಗ್ಗೆ ಮುಖ್ಯ ಕಾರ್ಯದರ್ಶಿಯವರು ಮಹಾರಾಜರೊಡನೆ ಮಾತನಾಡತಕ್ಕ ವಿಷಯ ಪತ್ರಿಕೆಯಲ್ಲಿಯೂ ಬಂದಿದೆ. ಇದು ಜನತೆಯ ಸೊತ್ತಾಗಿರುವುದರಿಂದ ಇದರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಕಾಣತಕ್ಕದ್ದು ಅಗತ್ಯವಿಲ್ಲ. ಇವತ್ತು ಬಡವರು ಏನಿದ್ದಾರೆ ಮತ್ತು ಅರೆ ಹೊಟ್ಟೆಯ ಜನ ಏನಿದ್ದಾರೆ, ಅವರನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗಿದೆಯೇ ವಿನಹ ಇಂತಹ ಬಂಡವಾಳಶಾಹಿಗಳನ್ನಲ್ಲ. ರಾಜ್ಯ ಸರ್ಕಾರದವರು ಮುಖ್ಯ ಕಾರ್ಯದರ್ಶಿಯವರನ್ನು ಅಲ್ಲಿಗೆ ಏಕೆ ಕಳಿಸಿದ್ದಾರೆಂಬುದನ್ನು ತಿಳಿಸಬೇಕು. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರವೂ ಇದೆ, ಮುಖ್ಯ ಮಂತ್ರಿಯವರ ಪಾತ್ರವೂ ಇದೆ. ರಾಜ್ಯ ಸರ್ಕಾರದವರು ತಮ್ಮ ಒಪ್ಪಿಗೆಯನ್ನು ಕೊಡದೆ ಪುನಃ ಕೇಂದ್ರ ಸರ್ಕಾರದವರು ಕೊಡುವುದಿಲ್ಲ. ಇದರಲ್ಲಿ ಶ್ರೀಮಾನ್ ದೇವರಾಜ ಅರಸರ ಪ್ರಮುಖ ವಾದ ಪಾತ್ರವಿದೆಯೆಂದು ತಿಳಿಯುತ್ತೇನೆ. ಏಕೆಂದರೆ ಇವರು ಅರಸರು. ಒಂದು ವೇಳೆ ಇದಕ್ಕೆ ಕಾನೂನಿನ ತಡೆ ಬಂದರೆ ಆ ಕಾನೂನನ್ನು ಬದಲಾವಣೆ ಮಾಡತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕು. ಆದ್ದರಿಂದ ನನ್ನ ನಿಲುವಳಿ ಸೂಚನೆಯ ಮೇಲೆ ಅಧ್ಯಕ್ಷರು ಕೊಟ್ಟಿರತಕ್ಕಂತಹ ಅಭಿಪ್ರಾಯವನ್ನು ರಿವ್ಯೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಆ ಅರಮನೆಗಳಿಗೆ ಒಂದಕ್ಕೆ 800 ಎಕರೆ ಜಮೀನು ಇದೆ, ಇನ್ನೊಂದರಲ್ಲಿ 400 ಎಕರೆ ಜಮೀನು ಇದೆ. ಪುನಃ ನೀವು ಮಹಾರಾಜರನ್ನು ರಾಜರನ್ನಾಗಿ ದಯವಿಟ್ಟು ಮಾಡಬೇಡಿ. ಅವರಿಗೆ ಜೀವನಕ್ಕೆ ಎಷ್ಟು ಬೇಕು, ಅಷ್ಟು ಅವರು ಇಟ್ಟುಕೊಳ್ಳಲಿ. ಆದರೆ ಅರಮನೆಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಮುಖ್ಯಮಂತ್ರಿಯವರು ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕು. ಮತ್ತು ಅಧ್ಯಕ್ಷರು ಏನೊಂದು ಅಪ್ಪಣೆಯನ್ನು ಅದರ ಮೇಲೆ ಕೊಟ್ಟಿದ್ದಾರೆ, ಅದನ್ನು ಪುನಃ ರಿವ್ಯೈಸ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಇದು ಬಹಳ ಗಂಭೀರವಾದ ಪ್ರಶ್ನೆ.

ಅಧ್ಯಕ್ಷರು.—ಇದು ಮಹತ್ವದ ಪ್ರಶ್ನೆಯೆಂದು ಈ ಮನೆಯಲ್ಲಿ ಎಷ್ಟೋ ಸಾರಿ ಚರ್ಚೆ ಮಾಡಿದ್ದೇವೆ. ಈಗ ಏನು ಮಹತ್ವದ ವಿಚಾರಗಳು ಇವೆಯೋ ಅವುಗಳನ್ನು ಬಂಗಾರಪ್ಪನವರು ಹೇಳಿದ್ದಾರೆ. ಪುನಃ ತಾವು ಏಕೆ ಎದ್ದುನಿಂತುಕೊಳ್ಳುತ್ತೀರಾ ?

† ಶ್ರೀ ವಾಟಾಳ್ ನಾಗರಾಜ್ —ಅಧ್ಯಕ್ಷರೇ, ಇದರಲ್ಲಿ ಯಾವ ಒಂದು ಪ್ರೆಸ್ಟೀಜ್ ಪ್ರಶ್ನೆಯಾಗಲಿ, ಅಥವಾ ಯಾರನ್ನಾದರೂ ದೂಷಿಸಬೇಕೆಂದಾಗಲಿ ನಮಗೆ ಉದ್ದೇಶ ಇಲ್ಲ. ಇವತ್ತು ಮಾನ್ಯ ಮುಖ್ಯ ಮಂತ್ರಿಯವರ ಧ್ಯೇಯ ಧೋರಣೆಗಳ ಬಗ್ಗೆ ನಾವು ಒಪ್ಪಿಕೊಂಡ ಜನರು. ಅವರು ಆಸ್ತಿ ಮಿತಿ ಎರಡು ಲಕ್ಷ ರೂಪಾಯಿಗಳು ಇರಬೇಕು ಮತ್ತು 10 ಸ್ಟ್ಯಾಂಡರ್ಡ್ ಎಕರೆ ಇರಬೇಕು ಎಂದು ಹೇಳುತ್ತಿದ್ದಾರೆ. ಅದನ್ನು ಇನ್ನೂ ಕಡಿಮೆ ಮಾಡಿದರೆ ನಮಗೆ ಇನ್ನೂ ಸಂತೋಷವಾಗುತ್ತದೆ. ನೀವು ಎಷ್ಟು ಕಡಿಮೆಗೆ ತರುತ್ತೀರೋ, ಅಷ್ಟನ್ನು ಮಾಡಿದರೆ ನಾನು ನಿಮಗೆ ನಿಮ್ಮ ಉದ್ದ ಮತ್ತು ತೂಕದಷ್ಟು ಗಾತ್ರದ ಹಾರವನ್ನು ಹಾಕುತ್ತೇನೆ. ದೆಹಲಿಯಲ್ಲಿ ನೀವು 10 ಸ್ಟ್ಯಾಂಡರ್ಡ್ ಎಕರೆ ಇರಬೇಕು, ಎರಡು ಲಕ್ಷಕ್ಕೆ ಸೀಲಿಂಗ್ ಲಿಮಿಟ್ ಇರಬೇಕೆಂದು ಹೇಳುತ್ತಿದ್ದೀರಿ. ಇಂತಹ ಕಾರ್ಯಕ್ರಮಗಳನ್ನು ತಾವು ಇವತ್ತು ದೇಶದಲ್ಲಿ ತೆಗೆದುಕೊಳ್ಳುತ್ತಿದ್ದೀರಿ. ನಾನು ನಿಮ್ಮ ಪಾರ್ಟಿಯವನು ಅಲ್ಲದಿದ್ದರೂ ನಿಮ್ಮ ಇಂತಹ ಕಾರ್ಯಕ್ರಮಗಳಿಗೆ ನಮಗೆ ಹೆಗಲಿಗೆ ಹೆಗಲು ಕೊಟ್ಟು ಸಹಕಾರ ನೀಡುವವರಲ್ಲಿ ಒಬ್ಬ. ಆದರೆ ಮೈಸೂರಿನ ಮಹಾರಾಜರ ಬಗ್ಗೆ ನನಗೆ ಬಹಳ ಅಪಾರವಾದ ನಂಬಿಕೆ ಇದೆ. ಅವರಿಗೆ ಬೇಕಾದರೆ, ಅಮೇರಿಕದಂತಹ ದೊಡ್ಡ ದೇಶದ ಅಂಬ್ಯಾಸಡರನ್ನಾಗಿ ಮಾಡಿ ; ಯಾರು ಬೇಡವೆನ್ನುತ್ತಾರೆ. 13 ಲಕ್ಷಕ್ಕೆ ಕಾರ್ಪೊರೇಷನ್ನಿನವರು ರಿಸೊಲ್ಯೂಶನ್ ಮಾಡಿ ಬೇಗಂ ಮಹಲನ್ನು ಖರೀದಿ ಮಾಡಬೇಕೆಂದು ಸಹ ಹೇಳುತ್ತಿದ್ದರು. ಬಳ್ಳಾರಿಯಲ್ಲಿ ಒಬ್ಬರು ದೊಡ್ಡ

ಶ್ರೀಮಂತರು ನನಗೆ ಸಿಕ್ಕಿದರು. ಅವರಿಗೆ ಮೂರು ದೊಡ್ಡ ದೊಡ್ಡ ಮನೆಗಳು ಇವೆ. ಅವರು ಈಗ ಭಯದಿಂದ ಒಂದು ಮನೆ ನನಗೆ ಇರಲಿ ಎಂದು ಹೇಳುತ್ತಿದ್ದಾರೆ. ಹೀಗೆ ಈಗ ಶ್ರೀಮಂತರು ಮನೆಗೆ ಸೀಲಿಂಗ್ ಬರುತ್ತದೆ ಎಂದು ಭಯಪಟ್ಟುಕೊಂಡು ಇರುವಾಗ ಈ ರೀತಿ ಮಾಡುವುದು ಸರಿಯಲ್ಲ.

2-30 P.M.

ಅಧ್ಯಕ್ಷರು.—ಒಂದು ನಿಮಿಷ, ಒಂದು ನಿಮಿಷ, ಸ್ವಲ್ಪ ಸ್ವಲ್ಪ, ತಾಳಿ, ತಾಳಿ ಎಂದುಕೊಂಡೇ ಒಂದೊಂದು ನಿಮಿಷದಂತೆ ಹೆಚ್ಚಿಸಿಕೊಳ್ಳುತ್ತಾ ನೀವು ನಿಮ್ಮ ಭಾಷಣವನ್ನು ಮಾಡುವುದಕ್ಕಾಗುವುದಿಲ್ಲ. ಆ ರೀತಿಯಾಗಿ ಕಾಲಾವಕಾಶವನ್ನು ನಿಮಗೆ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ. ಇತರ ಸದಸ್ಯರು ಹೇಳಿದ್ದನ್ನೇ ತಾವು ಹೇಳುತ್ತಾ ಹೋದರೆ ಕಾಲಾವಕಾಶ ಹೆಚ್ಚಿಗೆ ಬೇಕಾಗುತ್ತದೆ. ಈ ವಿಚಾರದಲ್ಲಿ ಸರ್ಕಾರ ಏನು ಹೇಳುತ್ತದೋ ಅದನ್ನು ಕೇಳೋಣ.

ಶ್ರೀ ವಾಟಾಳ್ ನಾಗರಾಜ್.—ಕೊನೆಯದಾಗಿ ಒಂದು ಮಾತು. ನಾನು ನಿಮಗೆ ಕಳುಹಿಸಿರತಕ್ಕ ನಿಲುವಳಿ ಸೂಚನೆಗೆ ತಾವು ಅವಕಾಶಮಾಡಿಕೊಟ್ಟು ಈ ಸಭೆಯಲ್ಲಿ ಅದು ಚರ್ಚೆಯಾಗಬೇಕು. ಆ ನಿಲುವಳಿ ಸೂಚನೆಯ ಚರ್ಚೆಗೆ ನೀವು ಅನುಮತಿ ಕೊಡಬೇಕು. ಇದು ಬಹಳ ಗುರುತರವಾದುದು. ಇದು ಇಡೀ ದೇಶದ ಪ್ರಶ್ನೆ. ಆಂಧ್ರಕ್ಕೆ ಬೇರೆ, ಮಹಾರಾಷ್ಟ್ರಕ್ಕೆ ಬೇರೆ, ಮೈಸೂರಿಗೆ ಬೇರೆ ಎನ್ನುವ ಪ್ರಶ್ನೆ ಬೇಡ. ಎಲ್ಲರಿಗೂ ಒಂದೇ ರೀತಿಯ ಕಾನೂನು ಅನ್ವಯವಾಗಬೇಕು. ಈ ವಿಚಾರವನ್ನು ಈ ಸಭೆಯಲ್ಲಿ ಚರ್ಚೆಮಾಡಲು ತಾವು ಅವಕಾಶ ಕೊಡಬೇಕೆಂದು ನಾನು ಒತ್ತಾಯಮಾಡುತ್ತೇನೆ.

Sri C. M. ARUMUGAM (K. G. F.).—I am one of those who have signed the Motion. I am not going to repeat what my other friends have said. My submission is that at the time of the merger of States, there were different agreements between different States. So far as Mysore State is concerned, a new clause has been added that the State Government shall be responsible for maintaining the Palaces so long as the ruler and his successors live. Since they have taken away the privileges and the privy purses of these Maharajas, there arises a situation whether these palaces are the property of the Government. If you agree that it is the property of the State, it is necessary that this House should be consulted in the matter We see some statement that the Maharaja has been permitted to alienate the property without the knowledge of this House. The question about the three palaces, two in the State and one at Ooty, has been raised several times in this House, but no official statement has been made by the Chief Minister to the Call Attention Notice that we have given. This House has been kept completely in the dark. It is a very important matter concerning the State. The decision of the Chief Minister cannot be a State decision ; the Party decision cannot be a State decision. This House is the custodian of all matters pertaining to the State and therefore this House is entitled to discuss this issue. You Madam as a senior Parliamentarian will accept that when the House is in Session, they cannot announce any decision outside the House. In fact, the decision about the appointment of Backward Classes Commission was announced without referring the matter in this House—of course the Finance Minister casually stated about it yesterday here. You have replied to our letter. But it is not a Ruling. A letter from the Hon'ble Speaker is not a Ruling, because it does not form part of the proceedings of this House. It is a matter of public importance concerning some crores of rupees and a matter which touches the Agreement. As you are aware,

(SRI C. M. ARUMUGAM)

the Palace in Rajasthan has been converted into a museum. Since you have not given a Ruling, I submit that even now you can kindly permit a discussion on this subject.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಮುಖ್ಯವಾದ ಪ್ರಶ್ನೆ ಅಡಗಿದೆ. ಇದರ ಬಗ್ಗೆ ಈಗಾಗಲೇ ಇನ್‌ಸ್ಟ್ರುಮೆಂಟ್ ಆಫ್ ಆಕ್ಸೆಷನ್ ಆಗಿರುವುದರಿಂದ ಈ ಮೂರು ಅರಮನೆಗಳ ಮೇಲ್ವಿಚಾರಣೆಯ ಕಾರ್ಯವನ್ನು ಸರ್ಕಾರವೇ ನಿರ್ವಹಿಸುತ್ತಾ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದೆ. ನನಗೆ ತಿಳಿದಿರುವ ಹಾಗೆ ಕೇಂದ್ರ ಸರ್ಕಾರ ಒಂದು ಕಂಡೀಷನ್ನನ್ನು ರಿವೋಕ್ ಮಾಡಿ ಅವನ್ನು ಮಾರಾಟಮಾಡುವುದಕ್ಕೆ ಅವಕಾಶಮಾಡಿಕೊಟ್ಟಿದೆ ಎಂಬ ಮಾತನ್ನು ನಾನು ಕೇಳುತ್ತಿದ್ದೇನೆ. ಒಂದುವೇಳೆ ಕೇಂದ್ರ ಸರ್ಕಾರ ಅಂತಹ ಅನುಮತಿಯನ್ನು ನೀಡುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ಅದನ್ನು ಪ್ರತಿಭಟಿಸಬೇಕಾಗಿತ್ತು. ಏಕೆಂದರೆ ಸುಮಾರು 25 ವರ್ಷಗಳಿಂದಲೂ ಈ ಅರಮನೆಗಳಿಗೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಅದು ಸರ್ಕಾರದ ಆಸ್ತಿ ಹಾಗೂ ಸಾರ್ವಜನಿಕರ ಆಸ್ತಿ ಎಂಬುದಾಗಿ ರೂಢಿಸಿಕೊಂಡು ಬಂದಮೇಲೆ ಅದನ್ನು ರಕ್ಷಣೆ ಮಾಡುವ ಜವಾಬ್ದಾರಿ ಈ ಸರ್ಕಾರಕ್ಕೆ ಇತ್ತು. ಅಂತಹ ಕೆಲಸದಲ್ಲಿ ಈ ಸರ್ಕಾರ ನಿಜವಾಗಿ ವಿಫಲವಾಗಿದೆಯೆಂದು ಕಾಣುತ್ತದೆ. ಏನೋ ಒಂದೆರಡು ಕೋಟಿ ರೂಪಾಯಿಗಳ ಆಸ್ತಿ ಎಂದರೆ ಹೋಗಲಿ ಎನ್ನಬಹುದು. ಆದರೆ ಇದು ಕೋಟ್ಯಾಂತ ರೂಪಾಯಿಗಳ ಆಸ್ತಿಯೆಂಬುದಾಗಿ ಪರಿಗಣಿಸುತ್ತಿರುವಾಗ ಇದರ ಬಗ್ಗೆ ಸರ್ಕಾರ ಇಷ್ಟು ಉದಾಸೀನವಾಗಿ ಹೆಚ್ಚು ಜವಾಬ್ದಾರಿ ತೆಗೆದುಕೊಳ್ಳದೆ ಹೋಗುವುದಾದರೆ ಈ ದೇಶದ ಜನ ಏನೆಂದಾರು ? ಈ ಸರ್ಕಾರದ ಮೇಲೆ ಅವರು ಯಾವ ರೀತಿ ವಿಶ್ವಾಸವಿಡಬೇಕೆಂಬುದು ಗೊತ್ತಾಗುತ್ತಾ ಇಲ್ಲ. ಮೇಲಾಗಿ ನನಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಅಪಾರವಾದ ವಿಶ್ವಾಸವಿದ್ದರೂ ಈ ರಾಜ್ಯದ ಪ್ರತಿನಿಧಿಗಳಾಗಿರತಕ್ಕವರು ಅವರು ಒಂದುವೇಳೆ ಕೇಂದ್ರಸರ್ಕಾರ ಯಾವುದೇ ಕಾರಣದಿಂದ ಅದರ ಬಗ್ಗೆ ಅಂತಹ ಅನುಮತಿಯನ್ನು ನೀಡಿದ್ದರೂ ಅದಕ್ಕೆ ವಿರೋಧ ಸಲ್ಲಿಸಬೇಕಾಗಿತ್ತು. ಈ ರಾಜ್ಯದ ಜನರ ಹಿತಾಸಕ್ತಿಯನ್ನು ಕಾಯಬೇಕಾಗಿತ್ತು. ಈ ಕೆಲಸದಲ್ಲಿ ಈ ಸರ್ಕಾರದವರು ವಿಫಲರಾಗಿದ್ದಾರೆಂದು ನನಗೆ ಸಂಪೂರ್ಣ ಮನವರಿಕೆಯಾಗಿದೆ. ಆದ್ದರಿಂದ ಇದರ ಚರ್ಚೆಗೆ ಖಂಡಿತವಾಗಿ ಈ ಸಭೆಯಲ್ಲಿ ಅವಕಾಶ ಕೊಡಬೇಕು. ಇದರ ಬಗ್ಗೆ ಕಾನೂನು ತಜ್ಞರು ಯಾವ ಅಭಿಪ್ರಾಯವನ್ನು ಕೊಟ್ಟಿದ್ದಾರೋ ಅದನ್ನು ಈ ಸಭೆಗೆ ತಿಳಿಸಬೇಕು. ಆ ಒಂದು ಇನ್ ಸ್ಟ್ರುಮೆಂಟನ್ನು ಸದನದ ಮುಂದೆ ಇಡಬೇಕು. ಈ ಅರಮನೆಗಳ ಆಸ್ತಿ ಪೂರ್ಣವಾಗಿ ಅರಸರಿಗೆ ಸೇರಿದೆಯೋ ಅಥವಾ ಈ ಸರ್ಕಾರಕ್ಕೆ ಸೇರಿದೆಯೋ ಎಂಬುದು ಆ ಒಂದು ಇನ್‌ಸ್ಟ್ರುಮೆಂಟಿನಲ್ಲಿ ಯಾವ ರೀತಿಯಲ್ಲಿ ಅಡಕವಾಗಿದೆ ಎಂಬುದನ್ನು ಈ ಸಭೆಯಲ್ಲಿ ತಿಳಿಸಬೇಕು. ಈ ಒಂದು ವ್ಯವಹಾರದಲ್ಲಿ ರಾಜ್ಯ ಸರ್ಕಾರದ ಕಾನೂನು ತಜ್ಞರು ಏನು ಅಭಿಪ್ರಾಯವನ್ನು ಸೂಚಿಸಿದ್ದಾರೆ, ಅದನ್ನು ತಾವು ಒಂದುವೇಳೆ ಈಗಾಗಲೇ ಪಡೆದಿದ್ದರೆ ಅದನ್ನೂ ಸಹ ಈ ಸಭೆಯ ಮುಂದೆ ಇಡಬೇಕೆಂದು ಹೇಳಬಯಸುತ್ತೇನೆ. ಅದು ಬಹಳ ಸೂಕ್ತವಾದುದು. ಇದರಲ್ಲಿ ನಿಮ್ಮ ಪ್ರಾಮಾಣಿಕತೆ ಎಷ್ಟೆಂಬುದನ್ನು ತೋರಿಸಬೇಕು. ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆ ಬಾಳತಕ್ಕ ಈ ಅರಮನೆಗಳ ಆಸ್ತಿಯ ಬಗ್ಗೆ ಕೇಂದ್ರಸರ್ಕಾರ ಏನಾದರೂ ಒಂದು ಅನುಮತಿ ಕೊಟ್ಟಿದ್ದರೆ ಅದನ್ನು ಪುನರ್ಪರಿಶೀಲನೆಮಾಡಿ ಅದನ್ನು ರಾಜ್ಯಸರ್ಕಾರದ ಆಸ್ತಿಯಾಗಿ ಉಳಿಸಿಕೊಳ್ಳಬೇಕೆಂಬ ದೃಷ್ಟಿಯಲ್ಲಿ ನಾವು ನೀವು ಎಲ್ಲರೂ ಈಗ ತೀರ್ಮಾನ ಮಾಡುವ ಸಂದರ್ಭ ಬಂದಿದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಮುಂದಾಳಾಗಿ ನಿಂತು ತೀರ್ಮಾನಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರ ಕೊಡುವುದಕ್ಕೆ ಮುಂಚೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ನಾನು ಈ ವಿಚಾರದಲ್ಲಿ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದೆ. ಅದಕ್ಕೆ ನನಗೆ ಉತ್ತರವನ್ನೂ ಸಹ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಜನರಲ್ ಡಿಸ್‌ಕಷನ್ನಿನಲ್ಲಿ ಪ್ರಸ್ತಾಪವಾಡಲಾಗಿದೆ. ಪುನಃ ಮೊನ್ನೆ ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯದ ಬಗ್ಗೆ ಚರ್ಚೆಮಾಡಿದ ಕಾಲದಲ್ಲಿಯೂ ಪ್ರಸ್ತಾಪಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದು ಕೇಂದ್ರಸರ್ಕಾರಕ್ಕೂ ಮತ್ತು ಮಹಾರಾಜರಿಗೂ ಸಂಬಂಧಪಟ್ಟ ವಿಷಯವೆಂಬುದಾಗಿ ಅವರ ಹೇಳಿಕೆಯಲ್ಲಿ ಹೇಳಿದ್ದಾರೆ. ಮತ್ತು ಇದು ರಾಜ್ಯಸರ್ಕಾರಕ್ಕೆ ಸಂಬಂಧವಿಲ್ಲವೆಂಬುದಾಗಿಯೂ ಹೇಳಿದ್ದಾರೆ. ಅಂದಮೇಲೆ ಅವರು ಅವರ ಪಕ್ಷದಲ್ಲಿ ಪ್ರಸ್ತಾಪಮಾಡಿದಂಥ ಒಂದು ವಿಷಯವನ್ನು

ಇಲ್ಲಿ ಪ್ರಸ್ತಾಪಮಾಡಿದ್ದಾರೆ. ಈ ಆಸ್ತಿಯ ಬಗ್ಗೆ ನೆಗೋಷಿಯೇಟ್ ಮಾಡುವ ವಿಚಾರವನ್ನು ಚೀಫ್ ಸೆಕ್ರೆಟರಿಯವರಿಗೆ ವಹಿಸಿ, ಆ ವಿಚಾರವಾಗಿ ಸೂಚನೆ ಕೊಟ್ಟಿದ್ದೇನೆ ಎಂಬುದಾಗಿ ಹೇಳಿದ್ದಾರೆ. ಬಹಶಃ ಅವರು ಈ ಸರ್ಕಾರದ ನಿಲುವನ್ನು ಮೊದಲೇ ಈ ಸಭೆಯ ಮುಂದೆ ತಿಳಿಸಿದ್ದರೆ ಬಹಳ ಚೆನ್ನಾಗಿತ್ತು. ಇದು ಒಂದು ಪಕ್ಷದ ಪ್ರಶ್ನೆಯಲ್ಲ. ಇಡೀ ರಾಜ್ಯದ ಜನತೆಗೆ ಸಂಬಂಧಪಟ್ಟ ಪಶ್ನೆ. ಇಂತಹ ಬೃಹತ್ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವ ಕಾಲದಲ್ಲಿ ಕೇವಲ ಒಂದೇ ಒಂದು ಪಕ್ಷದ ಪರಿಮಿತಿಗೆ ಅನ್ವಯವಾಗುವಂತಹ ನಿರ್ಣಯವನ್ನು ತೆಗೆದುಕೊಳ್ಳುವುದು ಸಮಂಜಸವಲ್ಲ. ಆ ರೀತಿಯಾಗಿ ಮಾಡಬಾರದಾಗಿತ್ತು. ಈ ಸಭೆಗೇ ಮೊದಲು ತಿಳಿಸಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬಹುದಾಗಿತ್ತು. ತಮ್ಮ ಒಂದು ಪಕ್ಷದ ಸಭೆಯಲ್ಲಿ ತೀರ್ಮಾನವಾದಂತ ಒಂದು ನಿರ್ಣಯದ ಪ್ರಕಾರ ಚೀಫ್ ಸೆಕ್ರೆಟರಿಯವರಿಗೆ ಸೂಚನೆಮಾಡಿದ್ದೇನೆಂದು ತಾವು ಹೇಳಿದ್ದೀರಿ. ನಾನು ಮೊದಲೇ ಹೇಳಿದಹಾಗೆ ಆ ಮರ್ಜರ್ ಅಗ್ರಿಮೆಂಟಿನಲ್ಲಿ ಹಾಕಿರತಕ್ಕ ಷರತ್ತುಗಳೇನು ಮತ್ತು ಆ ಆಸ್ತಿಗಳೆಲ್ಲಾ ನಾನ್ ಏಲಿಯನಬಲ್ಲೇ ಅಥವಾ ಅಲ್ಲವೇ ಎನ್ನುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಅಭಿಪ್ರಾಯವೇನು ಹಾಗೂ ಈ ವಿಚಾರಗಳ ಪರಿಶೀಲನೆಗಾಗಿ ಇವನ್ನು ಲಾ ಇಲಾಖೆಗೆ ಒಪ್ಪಿಸಲಾಗಿತ್ತೇ, ಹಾಗೆ ಒಪ್ಪಿಸಿದ್ದಲ್ಲಿ ಅವರೇನು ಶಿಫಾರಸ್ಸು ಮಾಡಿದ್ದಾರೆ, ಅವರ ಶಿಫಾರಸ್ಸಿಗನುಗುಣವಾಗಿ ಮಂತ್ರಿಮಂಡಲದವರು ಈ ತೀರ್ಮಾನ ತೆಗೆದುಕೊಂಡಿದ್ದಾರೆಯೇ ಅಥವಾ ಈ ತೀರ್ಮಾನವನ್ನು ಲಾ ಇಲಾಖೆಯವರ ಅಭಿಪ್ರಾಯವನ್ನು ತಿಳಿಯದೇನೇ ತೆಗೆದುಕೊಂಡಿದ್ದಾರೆಯೇ ಎನ್ನುವುದೊಂದೂ ಸಭೆಯಲ್ಲಿರತಕ್ಕ ಸದಸ್ಯರಿಗೆ ಗೊತ್ತಿಲ್ಲ. ಸರ್ಕಾರದವರು ಸಭೆಯಲ್ಲಿರತಕ್ಕ ಎಲ್ಲಾ ಪಕ್ಷಗಳ ಅಭಿಪ್ರಾಯವನ್ನು ಪಡೆದು ಈ ವಿಚಾರದಲ್ಲಿ ಇವರೊಂದು ತೀರ್ಮಾನಕ್ಕೆ ಬರಬೇಕಾಗಿತ್ತು. ಈ ಸಂದರ್ಭದಲ್ಲಿ ಒಬ್ಬೊಬ್ಬ ಮಂತ್ರಿಗಳು ಒಂದೊಂದು ರೀತಿಯ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಮಾನ್ಯ ಸಿದ್ಧವೀರಪ್ಪನವರು ಈ ಅರಮನೆಗಳನ್ನು ಅವರಿಗೆ ಮಾರಾಟ ಮಾಡಿಕೊಳ್ಳಲು ಬಿಟ್ಟು ಕೊಡತಕ್ಕದ್ದು ಒಂದು ಮಾನವೀಯತೆಯ ಪ್ರಶ್ನೆ ಎಂದು ಪರಿಗಣಿಸಬೇಕೆಂಬುದಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ವಿಚಾರ ಬೇರೆ ಆಯಿತು. ನನಗೆ ತೋರುತ್ತಿರುವುದರಲ್ಲಿ ಈ ಮಂತ್ರಿಮಂಡಲವರು ಕಾನೂನು ತಜ್ಞರು ಕೊಟ್ಟ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿ ನಡೆದಿದ್ದಾರೆಂದು ಕಾಣುತ್ತಿದೆ. ಯಾವುದೇ ಒಂದು ವಿಷಯವನ್ನು ಕಾನೂನು ಚೌಕಟ್ಟಿನಲ್ಲಿ ಪರಿಶೀಲನೆ ಮಾಡತಕ್ಕ ಸಂದರ್ಭವಿದ್ದಾಗ ಅದನ್ನು ಅಲ್ಲಗಳೆದು ಅದನ್ನು ಮಾನವೀಯತೆಯ ದೃಷ್ಟಿ ಇಂದು ನೋಡತಕ್ಕ ಪ್ರಶ್ನೆ ಇಲ್ಲಿ ಉದ್ಭವಿಸುವುದೇ ಇಲ್ಲ. ಹಿಂದೇ ಇದೇ ಸಭೆಯಲ್ಲಿ ಯಾವಾಗ ಇನ್ನೂ ಕಾಂಗ್ರೆಸ್ ಡಿವೈಡೆಡ್ ಆಗಿರಲಿಲ್ಲವೋ ಆಗ್ಗೆ ಇದೇ ಸಭೆಯಲ್ಲಿ ಸುಭಾಸ್ ನಗರದಲ್ಲಿ ಒಂದು ಜಾಗವನ್ನು 99 ವರ್ಷದ ಲೀಜ್ ಮೇಲೆ ಕೊಡತಕ್ಕ ಒಂದು ಸಂದರ್ಭದಲ್ಲಿ ಈಗ ಇಲ್ಲಿ ಮುಖ್ಯಮಂತ್ರಿಗಳಾಗಿರತಕ್ಕವರು ಅಂದು ವಿರೋಧಪಕ್ಷದ ಸದಸ್ಯರಾಗಿದ್ದು ಆ ವಿಚಾರದಲ್ಲಿ ಇವರು ದೊಡ್ಡ ಪ್ರತಿಭಟನೆ ಮಾಡಿ ಆ ವಾದದಲ್ಲಿ ಇವರು ಭಾಗಿಗಳಾಗಿದ್ದರು. ಆ ದಿವಸ ಅದೊಂದು ದೇಶದ ಆಸ್ತಿ. ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕ ವಿಚಾರದಲ್ಲಿ ವಿರೋಧಪಕ್ಷದ ಅಭಿಪ್ರಾಯ ಪಡೆಯಬೇಕಾಗಿತ್ತೆಂದು ಆ ದಿವಸ ಇವರು ವಾದ ಮಾಡಿದ್ದಾರೆ. ಹಾಗೇ ಈ ದಿವಸ ಇವರು ಸಂಧಾನ ನಡೆಸುತ್ತಿರುವ ಆಸ್ತಿಗಳೇನಿವೆ ಅವು ರಾಜ್ಯಕ್ಕೆ ಸಂಬಂಧಪಟ್ಟ ಈ ದೇಶಕ್ಕೆ ಸಂಬಂಧಪಟ್ಟ ಆಸ್ತಿಗಳು. ಅಂಥ ಆಸ್ತಿಗಳನ್ನು ಕೊಳ್ಳತಕ್ಕ ವಿಚಾರದಲ್ಲಿ ಅಥವಾ ಮಾರಾಟ ಮಾಡತಕ್ಕ ವಿಚಾರದಲ್ಲಿ ಸರ್ಕಾರ ಈ ಸದನದ ಅಭಿಪ್ರಾಯವನ್ನು ಪಡೆಯದೆ ಮಾಡಬಾರದು. ಈ ಮಂತ್ರಿಮಂಡಲದವರು ಕಾನೂನು ತಜ್ಞರ ಅಭಿಪ್ರಾಯವನ್ನು ಅಲ್ಲಗಳೆದು ನಾನ್ ಏಲಿಯನಬಲ್ ಎಂಬುದಾಗಿದ್ದ ಆಸ್ತಿಯನ್ನು ಏಲಿಯನಬಲ್ ಎಂದು ಮಾಡಿರತಕ್ಕದ್ದು ನಿಜವೇ ಅಲ್ಲವೇ ಅನ್ನುವುದನ್ನು ಇವರು ಸಭೆಗೆ ತಿಳಿಸಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ವಿಚಾರದಲ್ಲಿ ಕ್ಯಾಬಿನೆಟ್ಟಿನವರೂ ಕೂಡ ತೀರ್ಮಾನ ತೆಗೆದು ಕೊಂಡಿಲ್ಲವೆಂಬುದಾಗಿ ನಾನು ವರ್ತಮಾನ ಕೇಳುತ್ತಿದ್ದೇನೆ. ಈ ವಿಚಾರದಲ್ಲಿ ಮಾನವೀಯತೆಯ ದೃಷ್ಟಿಯಿಂದ ಪರಿಶೀಲನೆ ಮಾಡತಕ್ಕ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಈ ಸಭೆ ತೀರ್ಮಾನ ಮಾಡಬೇಕಾದ ವಿಷಯ ಇದು. ಒಬ್ಬಿಬ್ಬರು ವ್ಯಕ್ತಿಗಳು ಕುಳಿತು ತೀರ್ಮಾನ ಮಾಡತಕ್ಕ ವಿಷಯವಲ್ಲ ಇದು. ಮಾನ್ಯ ಮುಖ್ಯ ಮಂತ್ರಿಗಳಿಗೆ ದೇಶದ ಹಿತ ಮುಖ್ಯವೇ ವಿನಾ ಒಬ್ಬ ವ್ಯಕ್ತಿಯ ಹಿತಸಾಧನೆ ಅಷ್ಟು ಪ್ರಾಮುಖ್ಯವಾದುದಲ್ಲ, ಈ ದಿವಸ ದೇಶದಲ್ಲಿದ್ದ ರಾಜಮಹಾರಾಜರೆಲ್ಲರ ಪ್ರಿವೀಪರ್ಸನ್ನು ಕೇಂದ್ರ ಸರ್ಕಾರದವರು ಕಿತ್ತು ಹಾಕಿದ್ದಾರೆ. ಆ ರಾಜರುಗಳು ಈಗ ತೊಂದರೆಯಲ್ಲಿರಬಹುದು. ಆ ವಿಷಯ ಬೇರೆ. ಇಲ್ಲಿ ಇದನ್ನು ಒಂದು ಪಕ್ಷದ ಪ್ರಶ್ನೆಯನ್ನಾಗಿ ಆಗಲೀ ಇಲ್ಲವೇ ಒಂದು ಮಾನವೀಯತೆಯ ದೃಷ್ಟಿಯಿಂದ ನೋಡತಕ್ಕ ವಿಷಯವೆಂದಾಗಲಿ ಇದನ್ನು ಭಾವಿಸಿ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಇದು ಇಡೀ ದೇಶಕ್ಕೆ ಸಂಬಂಧಪಟ್ಟ ವಿಷಯ. ಇದನ್ನು ಕಾನೂನು ಪ್ರಕಾರ ತೀರ್ಮಾನ ಮಾಡಬೇಕಾಗಿದೆ. ಆದರೆ ಅವರೂ ಅರಸರು—ಇತ್ತ ಮುಖ್ಯ ಮಂತ್ರಿಗಳೂ ಅರಸರು ಅದರಿಂದ ಹಾಗೆ ಮಾಡಿದ್ದಾರೆಂದು ಆಗಲೇ ಯಾರೋ ಹೇಳಿದರು. ಆದರೆ

(ಶ್ರೀ ಹೆಚ್. ಡಿ. ದೇವೇಗೌಡ)

ನಮ್ಮ ಮುಖ್ಯ ಮಂತ್ರಿಗಳ ಮಾತು ಹಾಗಿರಲಿ. ಹಿಂದೆ ಇದ್ದ ಮಹಾರಾಜರುಗಳು ದೇಶದಲ್ಲಿ ಹಲವು ಉಪಯುಕ್ತ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಆ ಆಳರಸರ ವಿಚಾರದಲ್ಲಿ ಟೀಕೆ ಮಾಡುವುದಕ್ಕೆ ತಯಾರಿಲ್ಲ. ಇದು ಒಂದು ಬಾಂಧವ್ಯದ ಪ್ರಶ್ನೆಯಲ್ಲ. ಕಾನೂನು ಪ್ರಕಾರ ತೀರ್ಮಾನ ಮಾಡಬೇಕಾದಂಥ ಒಂದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಈ ವಿಚಾರದಲ್ಲಿ ಸರ್ಕಾರದವರು ಇವನ್ನು ದೇಶದ ಜನತೆಯ ಹಿತದೃಷ್ಟಿಯಿಂದ ನಿರ್ಣಯ ಮಾಡಿದ್ದಲ್ಲಿ ಒಳ್ಳೆಯದಾಗುತ್ತಿತ್ತು. ಆ ಅರಮನೆಗಳನ್ನು ವರ್ಷಂಪ್ರತಿ ಮೈಂಟೇನ್ ಮಾಡುವುದಕ್ಕೆ 75 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡಬೇಕೆಂದು ಮರ್ಜರ್ ಅಗ್ರಿಮೆಂಟಿನಲ್ಲಿ ನಮೂದಿಸಲಾಗಿದೆ. ಹಾಗೆ ಒಂದು ಷರತ್ತಿದ್ದಾಗ ಅದನ್ನು ಅಲ್ಲಗಳೆದು ಮುಖ್ಯಮಂತ್ರಿಗಳು ನಮ್ಮ ರಾಜ್ಯದ ಚೀಫ್ ಸೆಕ್ರೆಟರಿಗಳನ್ನು ಮೈಸೂರಿಗೆ ಮಹಾರಾಜರ ಹತ್ತಿರ ಕಳುಹಿಸಿ ಅರಮನೆಗಳನ್ನು ಕೊಳ್ಳುವುದರ ಬಗ್ಗೆ ವ್ಯವಹಾರ ನಡೆಸುತ್ತಿದ್ದಾರೆಂಬುದಾಗಿ ಈ ದಿವಸದ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಆದರೆ ಇದು ಮುಖ್ಯ ಮಂತ್ರಿಗಳ—ಮಹಾರಾಜರ ಮತ್ತು ಚೀಫ್ ಸೆಕ್ರೆಟರಿಗಳ ನಡುವೆ ನಡೆಯುತಕ್ಕಂಥ ಒಂದು ಖಾಸಗೀ ವ್ಯವಹಾರವಲ್ಲ. ಈ ದಿವಸ ಕೇಂದ್ರ ಸರ್ಕಾರದವರು ರಾಜ್ಯಾಂಗವನ್ನು ಅಮೆಂಡ್ ಮಾಡಿದ್ದಾರೆ. ಆಸ್ತಿಯನ್ನು ಅಕ್ವೈರ್ ಮಾಡಿಕೊಂಡಾಗ ಸರ್ಕಾರದವರು ಅಂಥ ಆಸ್ತಿಗೆ ಪರಿಹಾರವನ್ನು—ಕೊಡುವಾಗ ಅದಕ್ಕೆ ಮಾರುಕಟ್ಟೆಯ ಬೆಲೆಯನ್ನು ಕೊಡಬೇಕೇ ಅಥವಾ ಸರ್ಕಾರದವರು ಸರಿಯೆಂದು ತೀರ್ಮಾನ ಮಾಡಿದ ಬೆಲೆಯನ್ನು ಕೊಡಬೇಕೇ ಎನ್ನತಕ್ಕ ವಿಚಾರದಲ್ಲಿ ಈ ದಿವಸ ನ್ಯಾಯಾಲಯಗಳಿಗೂ ಕೂಡ ಇದು ಸರಿ ಇದು ಸರಿಯಲ್ಲ ಎಂದು ಹೇಳುವುದಕ್ಕೆ ಅವಕಾಶವಿಲ್ಲ. ಹಾಗಿರುವಾಗ ಸರ್ಕಾರದವರು ಒಬ್ಬ ವ್ಯಕ್ತಿಗೆ ಅನುಕೂಲ ಮಾಡಿ ಇಡೀ ದೇಶಕ್ಕೆ ಅನ್ಯಾಯ ಮಾಡತಕ್ಕ ಸಂದರ್ಭ ಇಲ್ಲಿ ಕಾಣುತ್ತಿರುವುದರಿಂದ, ಇದನ್ನು ಒಂದು ಪಕ್ಷದ ಪ್ರಶ್ನೆಯೆಂದು ಭಾವಿಸದೆ ಈ ಎಲ್ಲಾ ವಿಚಾರಗಳನ್ನೂ ಈ ಸಭೆಯಲ್ಲೇ ಚರ್ಚೆ ಮಾಡಿ ತೀರ್ಮಾನಕ್ಕೆ ಬರಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆಮಾಡಿ ಈ ಬಗ್ಗೆ ಜನರಲ್ಲಿ ಎದ್ದಿರತಕ್ಕ ಸಂಶಯ ನಿವಾರಣೆಗೆ ಇದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಇದರಲ್ಲಿ ಮುಖ್ಯವಾಗಿ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ. ಒಂದು ಕಾನೂನಿನ ಪ್ರಶ್ನೆ; ಅಗ್ರಿಮೆಂಟನ್ನು ರಿವೋಕ್ ಮಾಡಲು ಅವಕಾಶ ಇದೆಯೋ ಇಲ್ಲವೇ ಎನ್ನುವುದು. ಇನ್ನು ಎರಡನೇಯದು ಏಲಿಯನೇಷನ್ ಮಾಡುವುದಕ್ಕೆ ಅಗ್ರಿಮೆಂಟಿನಲ್ಲಿ ಅವಕಾಶವಿದೆಯೋ—ಇಲ್ಲವೇ ಎನ್ನುವುದು. ಆ ಆಸ್ತಿಗಳನ್ನು ಏಲಿಯನೇಟ್ ಮಾಡುವುದಕ್ಕೆ ಅಗ್ರಿಮೆಂಟ್ ಪ್ರಕಾರ ಅವಕಾಶವಿಲ್ಲ ಎಂದು ನಮಗೆ ತಿಳಿದು ಬಂದಿದೆ. ಇನ್ನೊಂದು ಪ್ರಶ್ನೆ ಮಹಾರಾಜರು ಇದನ್ನು ಮಾರಾಟ ಮಾಡಿಕೊಳ್ಳಲು ಕೇಂದ್ರ ಸರ್ಕಾರಕ್ಕೆ ಕೇಳಿಕೊಂಡಿದ್ದರು ಎಂಬುದು. ಇದೇ ವಿಚಾರದಲ್ಲಿ ಹಿಂದೆ ಇದ್ದ ಮಂತ್ರಿಮಂಡಲ ಅಂದರೆ ಶ್ರೀಮಾನ್ ದೇವೇಗೌಡರು ಸೇರಿರತಕ್ಕ ಪಕ್ಷದ ಆಡಳಿತವಿದ್ದ ಕಾಲಕ್ಕೆ ಅಂದರೆ ಶ್ರೀಮಾನ್ ವೀರೇಂದ್ರ ಪಾಟೀಲರ ಸರ್ಕಾರವಿದ್ದಾಗ ಅವರು ಆ ಆಸ್ತಿಗಳನ್ನು ಏಲಿಯನೇಷನ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದರೆಂದು ಶ್ರೀ ಗೌಡರು ಹೇಳುತ್ತಿದ್ದಾರೆ. ಅದಾದನಂತರ ಧರ್ಮವೀರ ಅವರ ಕಾಲದಲ್ಲಿ ಮತ್ತೆ ಇದೇ ವಿಚಾರದಲ್ಲಿ ನನಗೇನೂ ಸಂಬಂಧವಿಲ್ಲ ಎಂದು ಹೇಳಿ ಇದರ ಬಗ್ಗೆ ಕೇಂದ್ರಕ್ಕೆ ಅವರು ಪತ್ರ ಬರೆದಿದ್ದರೆಂದು ತಿಳಿದು ಬಂದಿದೆ. ಇನ್ನು ಇತ್ತೀಚೆಗೆ ಈ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಆ ಅಗ್ರಿಮೆಂಟಿನಲ್ಲಿ ಹಾಕಲಾಗಿದ್ದ ಏಲಿಯನೇಷನ್ ಕ್ಲಾಜನ್ನು ತೆಗೆದು ಹಾಕುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆಂದು ಈ ದಿವಸ ಇಂಡಿಯನ್ ಎಕ್ಸ್‌ಪ್ರೆಸ್ ಪೇಪರಿನಲ್ಲೂ ಕೂಡ ಬಂದಿದೆ. ಹೀಗೆ ಸರ್ಕಾರದವರು ಮಾಡಿರುವುದು ಅವರು ಹೇಳತಕ್ಕ ಸಮಾಜವಾದಕ್ಕೂ ಅವರೀಗ ನಡೆಸುತ್ತಿರುವುದಕ್ಕೂ ಸರಿಯಾಗಿದೆಯೇ? ಅವರುಹೇಳುತ್ತಿರುವ ತತ್ವಕ್ಕೆ ಈ ಕಾರ್ಯ ಅಳವಡುತ್ತಿದೆಯೇ? ಇಲ್ಲಿ ಕಾನೂನು ಪ್ರಶ್ನೆ ಉದ್ಭವವಾಗುವುದನ್ನು ಈ ಸರ್ಕಾರ ಅಲ್ಲಗಳೆದು ವರ್ತಿಸಿಲ್ಲವೇ? ಈ ಸಭೆಯ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವಂತೆ ರಾಜ್ಯಾಂಗಕ್ಕೆ 25 ನೇ ತಿದ್ದುಪಡಿಯನ್ನು ತಂದನಂತರ ಯಾರಿಗೂ ರೈಟ್‌ಟು ಪ್ರಾಪರ್ಟಿ ಇಲ್ಲ. ಅನ್ನತಕ್ಕ ಪಾಠವನ್ನು ನಾವು ಕೇಳುತ್ತಿದ್ದೇವೆ. ಈ ದಿವಸ ಕೂಡ ಮೋಹನ್ ಧಾರಿಯಾ ಅವರು ರಾಜ್ಯಾಂಗವನ್ನು ತಿದ್ದುಪಡಿ ಮಾಡಿ ದೇಶದಲ್ಲಿ ಪ್ರಗತಿಪರವಾದ ಧೋರಣೆಗಳನ್ನು ಜಾರಿಗೆ ತರುತ್ತೇವೆ ಎಂದು ಪತ್ರಿಕೆಗಳಲ್ಲಿ ಹೇಳಿದ್ದಾರೆ. ಹಾಗಿರುವಾಗ ಇವರು ಆ ಎಲ್ಲಾ ಸಮತಾವಾದ ತತ್ವಗಳಿಗೂ ತಿಲಾಂಜಲಿಯನ್ನು ಇತ್ತು ಇಂಥ ಕೆಲಸ ಮಾಡಿರುವುದು ಸರಿಯೇ? ಮುಖ್ಯಮಂತ್ರಿಗಳು ಚೀಫ್ ಸೆಕ್ರೆಟರಿಯವರನ್ನು ಮೈಸೂರಿಗೆ ಕಳುಹಿಸಿದ ನಂತರ ಆಡಳಿತ ಪಕ್ಷದಲ್ಲೇ ಗುಸು ಗುಸು ಅಂತ ಸುದ್ದಿಗಳೆದ್ದು ಅವರ ಪಕ್ಷದಲ್ಲೇ ಜನರಿಗೆ ಅನುಮಾನಗಳಿದ್ದಾವೆ ಎಂದು ಹೇಳುತ್ತಿದ್ದಾರೆ.

ಇನ್ನು ಎರಡನೇಯದಾಗಿ ಸಭೆಗೆ ಆ ಅಗ್ರಿಮೆಂಟನ್ನು ಒದಗಿಸಲಿ. ಸರ್ಕಾರದವರೇ ಏಲಿಯ ನೇಷನ್ನಿಗೆ ಅವಕಾಶ ಕೊಟ್ಟು ಅನಂತರ ತಾವೇ ಆ ಆಸ್ತಿಯನ್ನು ಕೊಳ್ಳುತ್ತೇವೆಂದು ಹೇಳತಕ್ಕದ್ದು ಒಂದು ದೊಡ್ಡ ಅಪರಾಧವಾಗುತ್ತದೆ. ಜನರ ಹಿತದೃಷ್ಟಿಯನ್ನು ಕಡೆಗಣಿಸಿ ಅದನ್ನು ಕೊಳ್ಳುವುದು ತಪ್ಪು.

ಇನ್ನು ಮೂರನೆಯದಾಗಿ ನಮ್ಮ ಮುಖ್ಯಮಂತ್ರಿಗಳು ಏನಿದ್ದಾರೆ ಇವರನ್ನು ಆ ಆಳರಸರ ಜೊತೆಯಲ್ಲಿ ಸೇರಿಸುವುದಕ್ಕಾಗುವುದಿಲ್ಲ. ಈ ಹಿಂದೆ ದೇಶದಲ್ಲಿ ಆಳರಸರ ಪದ್ಧತಿ ಹೋಗಬೇಕೆಂದು ವಾದ ಮಾಡುತ್ತಿದ್ದವರಲ್ಲಿ ಇವರೂ ಸೇರಿದ್ದಾರೆ. ಹಾಗಿರುವಾಗ ಆ ಅರಸರಿಗೆ ಏನೋ ಒಂದು ಉಪಾಯ ಮಾಡಿ ಅನುಕೂಲ ಮಾಡಿಕೊಡಬೇಕೆಂಬ ಆಸೆ ಇವರಿಗೇನೂ ಇದ್ದಂತೆ ಕಾಣುತ್ತಿಲ್ಲ. ಯಾರ ವಶದಲ್ಲಿ ಆ ಆಸ್ತಿ ಇದೆಯೋ ಅದನ್ನು ಮಾರಾಟಮಾಡುವುದಕ್ಕೆ ಅವರಿಗೆ ಹಕ್ಕಿಲ್ಲ ಮತ್ತು ಅದನ್ನು ಕೊಂಡುಕೊಳ್ಳತಕ್ಕ ಹಕ್ಕು ಸರ್ಕಾರಕ್ಕೂ ಇಲ್ಲ ಅಂದಾಗ ಪರಿಹಾರ ಕೊಡತಕ್ಕ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ಆದ್ದರಿಂದ ಪರಿಹಾರದ ಪ್ರಶ್ನೆ ಬಹಳ ಸ್ಪಷ್ಟವಾಗಿದೆ. ಒಂದು ನಯಾಪೈಸೆ ಪರಿಹಾರವನ್ನು ಕೂಡ ಕೊಡಬಾರದು ಎಂಬ ಅಭಿಪ್ರಾಯವಿದೆ. ಅನುಕೂಲ ಇಲ್ಲದಿರುವವರಿಗೆ ಕೊಡ ಬಹುದು. ಈ ಸಂದರ್ಭದಲ್ಲಿ ಪರಿಹಾರ ಕೊಡುವುದರಲ್ಲಿ ಅರ್ಥವಿಲ್ಲ. ಇದು ಬಹಳ ಗಹನವಾದ ಪ್ರಶ್ನೆ. ಇದು ನಿಲುವಳಿ ಸೂಚನೆಯ ಪ್ರಶ್ನೆಯಲ್ಲ, ಅದಕ್ಕಿಂತ ದೊಡ್ಡ ಪ್ರಶ್ನೆ. ಶ್ರೀ ಘೋರ್ಪಡೆಯವರು ಸರಿಯಾಗಿ ಉತ್ತರ ಹೇಳಲಿಲ್ಲ, ಮುಖ್ಯ ಮಂತ್ರಿಗಳು ಆ ದಿವಸ ಇರಲಿಲ್ಲ. ಇಂದು ಮುಖ್ಯ ಮಂತ್ರಿ ಗಳಿರುವುದರಿಂದ ನಮ್ಮನ್ನು ಅವರು ವಿಶ್ವಾಸಕ್ಕೆ ತೆಗೆದುಕೊಂಡು ಯಾವರೀತಿ ಹೇಗೆ ಮಾಡಬೇಕು ಎಂದು ನಮ್ಮನ್ನು ಕೇಳಿ ಮುಂದುವರೆಯಬೇಕು. ಶ್ರೀ ವಿ. ಎನ್. ಪಾಟೀಲರಮೇಲೆ ಒಂದು ಕೇಸಿದೆ. ನಾವು ಝಂಡ ಹಿಡಿದುಕೊಂಡು ಅರಮನೆ ಬಳಿ ಇರುವ ಪ್ರದೇಶದಲ್ಲಿ ಕಾರ್ಮಿಕರಿಗೆ ಸೈಟುಮಾಡಿಕೊಡಿ, ಜನರಿಗೆ ಅವನ್ನು ಹಂಚಿ, ಅರಮನೆಯನ್ನು ಮ್ಯೂಸಿಯಂ ಮಾಡಿ ಎಂದು ಗಲಾಟೆ ಮಾಡಿದೆವು. ಇದು ಬಹಳ ಮುಖ್ಯವಾದ ಪ್ರಶ್ನೆ. ನಮ್ಮನ್ನು ವಿಶ್ವಾಸಕ್ಕೆ ತೆಗೆದು ಕೊಳ್ಳಬೇಕು.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ವಿಷಯ ನಿನ್ನೆಯ ದಿವಸ ಇಲ್ಲಿ ಪ್ರಸ್ತಾಪಿಸಲ್ಪಟ್ಟಿತ್ತೆಂದು ಕಾಣುತ್ತದೆ. ಅಪ್ರೋಪ್ರಿಯೇಷನ್ ಬಿಲ್ಲಿನ ಮೇಲೆ ಚರ್ಚೆಯಾಗುವಾಗ ಈ ವಿಚಾರ ಬಂದಿರುವಂತೆ ಕಾಣುತ್ತದೆ. ನಿನ್ನೆ ಈ ವಿಚಾರ ಬಂದಾಗ ನಾನು ಇರಲಿಲ್ಲ, ಮೇಲ್ಮನೆಗೆ ಹೋಗಿದ್ದೆ. ಮೊದಲು ಕಾಲ್ ಅಟೆನ್‌ಷನ್ ನೋಟೀಸನ್ನು ಗಮನಕ್ಕೆ ತಂದಾಗ ಅದಕ್ಕೆ ಉತ್ತರ ಸಿದ್ಧಮಾಡಿದ್ದೆ. ಬಹುಶಃ ಅದಿನ್ನೂ ತಮ್ಮ ಗಮನಕ್ಕೆ ಬಂದಿರಲಿಲ್ಲವೆಂದು ಕಾಣುತ್ತದೆ. ಈ ದಿವಸ ಬರಬಹುದು. ಈ ದಿವಸ ನಿಲುವಳಿ ಸೂಚನೆ ಬಂದಿದೆಯೆಂದು ಗೊತ್ತಾಗಿದೆ. ಅದರ ವಿಚಾರ ಇಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಹಿಂದೆ ಈ ವಿಚಾರ ಚರ್ಚೆಯಾದಾಗ ನಾನು ವಿವರ ಹೇಳಿದ್ದೆ, ನನಗೆ ತಿಳಿದಂತೆ ಆಗ ತಿಳಿಸಿದ್ದೆ. ನಾನು ಯಾವುದಾದರೂ ದುರುದ್ದೇಶದಿಂದ ಯಾವುದನ್ನೂ ಮುಚ್ಚುಮರೆಮಾಡಿಲ್ಲ. ಯಾರಿಗಾದರೂ ಸಹಾಯವಾಗಲಿ ಎಂದು ಏನೂ ಮಾಡಿರುವುದಿಲ್ಲ. ಹಿಂದೆ ಹೇಳಿರುವುದನ್ನೇ ಇಂದೂ ನಾನು ಹೇಳುತ್ತಿದ್ದೇನೆ. ಸ್ವಲ್ಪಮಟ್ಟಿಗೆ ನನ್ನ ವಿಚಾರ ಶ್ರೀ ಕೃಷ್ಣನ್‌ರವರು ಹೇಳಿ ನನ್ನ ಕೆಲಸವನ್ನು ಸ್ವಲ್ಪ ಹಗುರುಮಾಡಿದ್ದಾರೆ. I must thank him for it. ಶ್ರೀ ಬಂಗಾರಪ್ಪ ನವರು ಈಚೆಗೆ ಬಂದವರು, ಅವರಿಗೆ ಹೆಚ್ಚು ಗೊತ್ತಿಲ್ಲ. ಆದುದರಿಂದ ಅವರ ವಯಸ್ಸಿಗೆ ತಕ್ಕ ಧಾಟಿಯಲ್ಲಿ ಅವರು ಹೇಳುತ್ತಿದ್ದಾರೆ. ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಬೇಕಾಗಿಲ್ಲ. 1940 ನೆಯ ಇಸವಿಯಲ್ಲಿ ಮಹಾರಾಜರು ಇದಕ್ಕಿಂತ ಬಹಳ ಜೋರಾಗಿದ್ದರು. ಆಗ ನಾವು ಕಾಂಗ್ರೆಸ್ ಚಳವಳಿ ಮಾಡಿದೆವು. ಆಗ ನಾನು ಅದೇ ಜಾತಿಯವನೇ ಆಗಿದ್ದೆ; ಈಗ ಹೊಸ ದಾಗಿ ಆಗಿಲ್ಲ. ಈ ವಿಚಾರವನ್ನು ಇಷ್ಟಕ್ಕೆ ಬಿಡುತ್ತೇನೆ.

ಸಮಾಜವಾದದ ವಿಚಾರದಲ್ಲಿ ನಾವು ನಂಬಿಕೆಯುಳ್ಳವರು. ಆದುದರಿಂದ ಇವರೇಕೆ ಹೀಗೆ ಮಾಡುತ್ತಿದ್ದಾರೆ ಎಂದು ಸಹಜವಾಗಿ ಯಾರ ಮನಸ್ಸಿನಲ್ಲಾದರೂ ಒಂದು ಅಪನಂಬಿಕೆ ಉಂಟಾಗು ವಂಥ ಸನ್ನಿವೇಶವಿದೆ. ಇದನ್ನು ಇಲ್ಲವೆಂದು ಹೇಳುವುದಿಲ್ಲ. ಆ ದೃಷ್ಟಿಯಿಂದ ಹೆಚ್ಚೇನು ನಡೆದಿದೆ ಎಂಬುದನ್ನು ಸ್ಪಷ್ಟಪಡಿಸಬೇಕಾದ್ದು ನನ್ನ ಕರ್ತವ್ಯವಾಗಿದೆ. ಮತ್ತೆ ಈ ವಿಷಯಗಳನ್ನು ಈ ಮನೆಯಲ್ಲಲ್ಲದೆ ಪಕ್ಷದಲ್ಲಿ ಪ್ರಸ್ತಾಪಮಾಡಿದ್ದಾರೆ ಎಂದು ಎದುರು ಪಕ್ಷದ ನಾಯಕರು ಆಕ್ಷೇಪಿಸಿ ದ್ದಾರೆ. ಪ್ರಜಾಸತ್ತೆಯಲ್ಲಿ ಪಾರ್ಟಿ ಸಿಸ್ಟಂ ಆಫ್ ಡೆಮೊಕ್ರಸಿ ಇರುವಾಗ ಪಕ್ಷದಲ್ಲಿ ಈ ವಿಚಾರ ಪ್ರಸ್ತಾಪ ಮಾಡಿರುವುದು ಸಹಜವಾದುದು, ಸೂಕ್ತವಾದುದು, ಕಾನೂನಿನ ಚೌಕಟ್ಟಿನಲ್ಲಿ ಸಂಪ್ರದಾಯದ ಚೌಕಟ್ಟಿನಲ್ಲಿ ನಡೆದಿರುವ ನಡವಳಿಕೆ. ಆದುದರಿಂದ ಇದರ ಬಗ್ಗೆ ನಾನೇನೂ

(ಶ್ರೀ ಡಿ. ದೇವರಾಜ ಅರಸ್)

ಇದು ಸರಿ ಎಂದು ಹೇಳಬೇಕಾದ ಅಗತ್ಯವಿಲ್ಲ. ಯಾವ ಪಕ್ಷ ಸರಕಾರವನ್ನು ನಡೆಸುತ್ತದೆಯೋ ಆ ಪಕ್ಷ ತನ್ನ ಪಕ್ಷದಲ್ಲಿ ವಿಚಾರಗಳನ್ನು ಪ್ರಸ್ತಾಪಮಾಡುವ ಹಕ್ಕನ್ನು ಕಳೆದುಕೊಂಡಿಲ್ಲ. ಮತ್ತು ಈ ವಿಷಯಗಳನ್ನು ಕಾನೂನು ಪ್ರಕಾರ ನೋಡಬೇಕೆಂಬ ಧೋರಣೆಯನ್ನು ಈಗ ಮಾತನಾಡಿದ ಎಲ್ಲ ಮಾನ್ಯ ಮಿತ್ರರೂ ಒಪ್ಪುತ್ತಾರೆ. ಇದನ್ನು ಒಪ್ಪಿದಮೇಲೆ ಆ ತತ್ವದ ಪ್ರಕಾರ ಸರಕಾರದ ನಡೆವಳಿಕೆ ನಡೆದಿದೆ ಎಂಬುದನ್ನು ನಾನು ಈ ಸಭೆಗೆ ಸ್ಪಷ್ಟಪಡಿಸಬೇಕಾಗಿದೆ ಎಂದು ನನಗನ್ನಿಸುತ್ತದೆ. ಮಾನವೀಯತೆ ದೃಷ್ಟಿಯಿಂದ ನೋಡಿದ್ದೇನೆ, ಆ ದೃಷ್ಟಿ ಈ ಸಂದರ್ಭಕ್ಕೆ ಸಲ್ಲುವುದಲ್ಲ ಎಂಬ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಬಹಳಮಟ್ಟಿಗೆ ಒಪ್ಪುತ್ತೇನೆ. ನಾನು ಆ ಮಾತನ್ನು ಎಲ್ಲೂ ಹೇಳಿದಹಾಗೆ ಜ್ಞಾಪಕವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಪತ್ರಿಕೆಯಲ್ಲಿದೆ.

ಶ್ರೀ ಡಿ. ದೇವರಾಜ ಅರಸ್.—ಅದು ಬೇರೆ ವಿಷಯ. ಸದಸ್ಯರು ತಪ್ಪನ್ನು ತೋರಿಸಿದರೆ ಒಪ್ಪುವುದಕ್ಕೆ ಸಿದ್ಧವಾಗಿದ್ದೇನೆ. ಈಗ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ತಾರುಣ್ಯದಲ್ಲಿ ರಾಜರುಗಳಿಗೂ ಕೇಂದ್ರ ಸರಕಾರಕ್ಕೂ ನಡೆದ ಒಪ್ಪಂದಗಳ ವಿಷಯಕ್ಕೆ ಬರುತ್ತೇನೆ. ಆ ಒಪ್ಪಂದದ ಆಧಾರದಮೇಲೆ ಅರಮನೆಗೆ ಸಂಬಂಧಪಟ್ಟ ವಿಷಯಗಳು ನಡೆದುಕೊಂಡು ಬಂದಿವೆ. ನಾವು ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ ಎಂದು ಹಿಂದೆ ಹೇಳಿದ್ದೇನೆ, ಈಗಲೂ ಅದನ್ನೇ ಹೇಳುತ್ತಿದ್ದೇನೆ. ಈ ಪಕ್ಷ ನನ್ನೊಬ್ಬನದೇನೂ ಅಲ್ಲ. ಮಾನ್ಯ ಸದಸ್ಯರು ಒಂದು ಶಂಕೆ ವ್ಯಕ್ತಮಾಡಿದರು. ಏನಾದರೂ ತಪ್ಪು ಮಾಡಿದ್ದಾರೇನೋ ಎಂದು ಶಂಕೆಪಟ್ಟರು. ಹಾಗೇನೂ ಮಾಡಿಲ್ಲ. ಯಾವುದಾದರೂ ಇಂಥ ವಿಷಯಗಳು ಕ್ಯಾಬಿನೆಟ್ ತೀರ್ಮಾನಕ್ಕೆ ಒಳಪಟ್ಟಿರುವಾಗ ಯಾವರೀತಿಯಲ್ಲಿ ಎಲ್ಲಾ ವಿಷಯಗಳೂ ಪ್ರೋಸೆಸ್ ಆಗುತ್ತವೆಯೋ ಅದೇ ರೀತಿಯಲ್ಲಿ ಕ್ಯಾಬಿನೆಟ್ ಮುಂದೆ ಬಂದು ಅಲ್ಲಿ ಚರ್ಚೆಯಾಗಿ ತೀರ್ಮಾನ ತೆಗೆದುಕೊಂಡಿದೆ.

3-00 P.M.

ಮತ್ತೆ ಇಲ್ಲಿ ಇನ್ನೊಂದು ಮಾತು ಏನೆಂದರೆ ಈ ರೀತಿ ಒಪ್ಪಿಗೆ ಕೊಡಬೇಕಾಗಿತ್ತೇ ಇಲ್ಲವೇ ಎನ್ನುವ ವಿಚಾರದಲ್ಲಿ ಭಿನ್ನಾಭಿಪ್ರಾಯ ಇದೆ. ಮಾನ್ಯ ಸ್ನೇಹಿತರು ಅನೇಕರು ಈಗ ಹೇಳಿದ್ದಾರೆ. ಸರ್ಕಾರ ಈರೀತಿ ಒಪ್ಪಿಗೆ ಕೊಡಬಾರದಾಗಿತ್ತು ಎಂದು. ಅದರಲ್ಲಿ ಎರಡು ತರಹ ವಾದ ಮಾಡುವುದಕ್ಕೆ ಅವಕಾಶ ಇದ್ದಿರಬಹುದು. ನಾನು ಒಂದು ವೇಳೆ ಆ ರೀತಿ ವಾದ ಮಾಡುವುದಾದರೆ ಅದು ಶುದ್ಧ ತಪ್ಪಾಗುತ್ತದೆ, ಅದು ಸರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವರವರ ವ್ಯೂಸ್‌ನಲ್ಲಿ ಬೇರೆಬೇರೆ ಹೇಳಬಹುದು. ಅದು ಅವರ ಅಭಿಪ್ರಾಯ. ನಾವು ಈರೀತಿ ಅಭಿಪ್ರಾಯಕ್ಕೆ ಬರುವುದಕ್ಕೆ ಏನಾದರೂ ಒಂದು ಆಧಾರ ಇರಬೇಕು. ಆ ಆಧಾರಗಳ ಮೇಲೆ ಕೆಲವು ಸ್ನೇಹಿತರು ಹೇಳಿದ ಹಾಗೆ ಅವರಿಗೆ ನಾವು ದಾಕ್ಷಿಣ್ಯ ತೋರಿಸಿ ಸಹಾಯ ಮಾಡುವುದು ಒಂದು ಹಿನ್ನೆಲೆ ಇರಬಹುದು. ಅಥವಾ ನಾವು ಮಾನವೀಯತೆಯಿಂದ ಸಹಾಯ ಮಾಡುವುದು ಒಂದು ಹಿನ್ನೆಲೆ ಇರಬಹುದು. ಇಲ್ಲವೇ ಕಾನೂನು ಪ್ರಕಾರ ನಡೆದಿರಬಹುದು. ಈಗ ನಾನು ಮೊದಲೇ ತಿಳಿಸಿದ ಹಾಗೆ ಎಷ್ಟು ಹೇಳಿದರೂ ಅವರು ಸಂಬಂಧ, ಜಾತಿ, ಮೈತ್ರಿಯಿಂದ ಮಾಡಿದ್ದಾರೆ ಎಂದು ಯಾರಾದರೂ ಅನ್ನುವುದಾದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ನಾನು ಈರೀತಿ ಹೇಳಬಹುದು, ಇನ್ನೊಬ್ಬರು ಹಾಗೆ ಮಾಡಿದ್ದೀರಿ ಎಂದು ಹೇಳಬಹುದು. ಇದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಇದು ಸರಿಯಲ್ಲ ಎಂದು ಹೇಳಬಹುದು. ಮಾನವೀಯತೆ ದೃಷ್ಟಿಯಿಂದ ವಿಚಾರವೆಲ್ಲವನ್ನೂ ಒಪ್ಪಿಕೊಂಡು ಇಂತಹ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇನ್ನು ನಮಗೆ ಕಾನೂನಿನ ಬಗ್ಗೆ ಪೂರ್ಣ ಆಧಾರ ಇದೆಯೇ ಎನ್ನುವುದನ್ನು ತಿಳಿಸಬೇಕು. ಅದನ್ನು ತಿಳಿಸುವುದಕ್ಕೆ ಕೇಂದ್ರದಿಂದ ಬಂದಿರತಕ್ಕ ಒಂದು ಕಾಗದವನ್ನು ಈ ಸಭೆಯ ಮುಂದೆ ಓದಿದರೆ ಬಹುಶಃ ನಾವು ಅದಕ್ಕಾಗಿ ಈ ತೀರ್ಮಾನಕ್ಕೆ ಬಂದಿದ್ದೇವೆ ಎನ್ನುವುದನ್ನು ಅವರು ಸ್ಪಷ್ಟಪಡಿಸುತ್ತಾರೆ ಎಂದು ನನ್ನ ನಂಬಿಕೆ. ಕೇಂದ್ರದಿಂದ ನಮಗೆ ಕಾಗದ ಬಂದಿರುವುದನ್ನು ಈ ಸಭೆಯ ಮುಂದೆ ಓದುತ್ತೇನೆ: ಆ ಕಾಗದ ಚೀಫ್ ಸೆಕ್ರೆಟರಿಯವರಿಗೆ ಬಂದಿದೆ. ಅದು ಈರೀತಿ ಇದೆ:

Letter dated October 15, 1971, from the Ministry of Home Affairs, addressed to the Chief Secretary.

Kindly refer to your letter No. GAD 11/PSR 30-4-1971, dated 30th April 1971 regarding the removal of condition of inalienability attached to certain properties of the Maharaja of Mysore. In this letter you have stated that the Palaces in question are "State properties with limited rights of user vested with the Ruler for the time being". You have also requested for copies of the original inventory furnished by the Maharaja to the Government of India and the correspondence between the Maharaja and the Government of India on this matter. The original inventory of immovable properties, securities and cash balances claimed by the Maharaja of Mysore as his private property was sent to us by the Huzur Secretary to His Highness the Maharaja in February 1950. All the properties mentioned in that list had been accepted by the Government of India as the private properties of the Maharaja with the concurrence of the State Government. We have on record a list which bears the signature of the Chief Secretary to the State Government as also of Sri V. P. Menon, Secretary, Ministry of States. It appears from the State Government's letter No. 16102-CB dated 4/6-2-1951 (copy enclosed) that three such lists were prepared and we take it that a copy of each would be available with the State Government. If however, it is desired that copies of these communications should be made available to the State Government, we shall be glad to do so. It is clear from the inventory of private properties of the Maharaja of Mysore that the three Palaces at Mysore, Bangalore and Ootacamund had been declared as the private property of the Maharaja. While the Mysore Government had, at the time of private property settlement, agreed to bear the expenditure on the maintenance of the buildings, grounds and gardens, inclusive of water supply and electricity, they did not then object to these Palaces being declared as the private properties of the Maharaja. We are unable to accept the views held by the State Government that the Maharaja has only the user's right in these properties. We are also advised that since the private property settlement was finalised by the Government of India, it is open only to that Government to modify the private properties settlement and to revoke the inalienability clause.

ಈ ಕಾಗದದ ಪ್ರಕಾರ ನಾವು ತೆಗೆದುಕೊಂಡಿರತಕ್ಕ ನಿಲುವನ್ನು ಸಮರ್ಥನೆ ಮಾಡಿದ್ದೇವೆ. ಮತ್ತೆ ಒಂದು ಮಾತು ಈಗ ನೀವು ಏತಕ್ಕೆ ಚೀಫ್ ಸೆಕ್ರಟರಿಯವರನ್ನು ಕಳುಹಿಸಿದ್ದೀರಿ ಇದರಲ್ಲಿ ಹಿನ್ನೆಲೆ ಏನು ಇದೆಯೋ ಅನ್ನುವುದು ಒಂದು ವಿಚಾರ. ಮತ್ತು ಆ ಆಸ್ತಿಗೆ ಕಾಂಪೆನ್ಸೇಷನ್ ಕೊಡುವ ವಿಚಾರದಲ್ಲಿ ಕಾಂಪೆನ್‌ಸೇಷನ್ ಕೊಡದೆ ಸರ್ಕಾರವೇ ನೇರವಾಗಿ ತೆಗೆದುಕೊಳ್ಳುವುದು ಯೋಗ್ಯ. ಇದು ನಮ್ಮ ಪಕ್ಷದ ನಿಲುವು. ಅದು ಸರಿಯಾದ ಮಾರ್ಗ ಎನುವುದು ನಮ್ಮ ಶ್ರೀಮಾನ್ ಕೃಷ್ಣನ್‌ರವರ ವಾದ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ನಮಗೆ ಒಂದು ಪತ್ರ ಬರೆದು ಏನು ತಿಳಿಸಿದ್ದಾರೆ ಎಂದರೆ ನಾನು ಹೋದ ಸಲ ಸಾಮಾನ್ಯ ಬಡ್ಜೆಟ್ ಚರ್ಚೆಯಲ್ಲಿ ಈ ಮಾತನ್ನು ಹೇಳಿದ್ದೇನೆ. ಮೈಸೂರು ಅರಮನೆಯನ್ನು ಒಂದು ಟ್ರಸ್ಟ್ ಮಾಡುವುದು ಸೂಕ್ತವೆಂದು ಹೇಳಿದ್ದೇನೆ. ನಾನು ಒಂದು ಸಲಹೆ ಮಾಡಿದ್ದೇನೆ. ಅಂದರೆ ಸರ್ಕಾರದವರು ಮಾಡಿದ್ದಾರೆ. ಆ ಸಲಹೆಯನ್ನು ಕೇಂದ್ರ ಸರ್ಕಾರದವರು ಒಪ್ಪಿ ಅದು ಒಳ್ಳೆಯ ಸಲಹೆ ಎಂದು ಕಾಗದ ಬರೆದಿದ್ದಾರೆ. ನನ್ನ ಸಲಹೆ ಏನೆಂದರೆ ಆ ಟ್ರಸ್ಟ್‌ನಲ್ಲಿ ನಮ್ಮ ಪ್ರತಿನಿಧಿ ಮತ್ತು ಕೇಂದ್ರ ಸರ್ಕಾರದ ಪ್ರತಿನಿಧಿ ಇರುವಂತೆ ವ್ಯವಸ್ಥೆ ಮಾಡಬೇಕು ಎಂದು ನಾವು ಅವರಿಗೆ ತಿಳಿಸಿದ್ದೇವೆ. ಅವರು ಪ್ರೈವೇಟ್ ಪ್ರಾಪರ್ಟಿಯನ್ನು ಏಲಿನಿಯೆನೇಟ್ ಮಾಡುವುದಕ್ಕೆ ಅವಕಾಶ ಕೊಡಿ ಎಂದು

(ಶ್ರೀ ಡಿ. ದೇವರಾಜ ಅರಸ್)

ಪತ್ರ ಬರೆದರು. ಅದಾದ ಮೇಲೆ ಪತ್ರ ಬಂದು 1-2 ದಿನಗಳು ಆಗಿತ್ತೋ ಏನೋ ನಾವು ಇನ್ನೂ ಮಹಾರಾಜರಿಗೆ ಕಳುಹಿಸಿರಲಿಲ್ಲ. ಕೇಂದ್ರದ ಹೋಮ್ ಡಿಪಾರ್ಟ್‌ಮೆಂಟಿನ ಸೆಕ್ರೆಟರಿಯವ ರೊಬ್ಬರು ನಮಗೆ ಫೋನ್ ಮುಖಾಂತರ ತಿಳಿಸಿದರಂತೆ. ಶ್ರೀಮಾನ್ ಹನುಮಂತಯ್ಯನವರು ಈಗ ರೈಲ್ವೆ ಮಿನಿಸ್ಟರ್ ಆಗಿ ಯೂನಿಯನ್ ಮಿನಿಸ್ಟ್ರಿನಲ್ಲಿರುವವರು. ಇದರಬಗ್ಗೆ ನಮ್ಮಲ್ಲಿ ಪ್ರಸ್ತಾಪ ಮಾಡಿ ನಾನು ಮುಖ್ಯಮಂತ್ರಿಗಳಲ್ಲಿ ಹೋಗಿ ಮಾತನಾಡಬೇಕಾದುದು ಇದೆ ಎಂದು ಹೇಳಿದರು. ಆದ್ದರಿಂದ ನೀವು ರಾಜ್ಯ ಸರ್ಕಾರದವರಿಗೆ ಅದನ್ನು ಹಾಗೆಯೇ ಸ್ವಲ್ಪ ಇಡುವುದಕ್ಕೆ ಹೇಳಿ, ಎಂದು ಅವರು ತಿಳಿಸಿದರಂತೆ.

ಈ ರೀತಿ ಅಲ್ಲಿಯ ಸೆಕ್ರೆಟರಿಯವರು ಅವರು ಕಳುಹಿಸಿರುವ ಕಾಗದವನ್ನು ಶ್ರೀ ಹನುಮಂತಯ್ಯ ನವರು ಬಂದು ಮಾತನಾಡಿಕೊಂಡು ಹೋಗುವವರೆಗೂ ಸ್ವಲ್ಪ ಹಾಗೆಯೇ ತಡೆದು ಇಡಿ ಎಂದು ಫೋನ್ ಮುಖೇನ ತಿಳಿಸಿದರು. ಶ್ರೀ ಹನುಮಂತಯ್ಯನವರು ಇಲ್ಲಿಗೆ ಬಂದರು. ಬಂದು ಈ ವಿಚಾರ ನನ್ನಲ್ಲಿ ಪ್ರಸ್ತಾಪ ಮಾಡಿದರು. ಅವರು ತಿಳಿಸಿದಂಥ ಅಭಿಪ್ರಾಯ ಇಷ್ಟು. ಈಗ ಮಹಾರಾಜರ ಈ ಅರಮನೆಗಳು ಅವರ ಪ್ರೈವೇಟ್ ಪ್ರಾಪರ್ಟಿ ಎಂದು ಹೇಳಿದರೂ ನನ್ನ ಅಭ್ಯಂತರವಿಲ್ಲ. ಆದರೆ ಯಾವ ಕಾರಣಕ್ಕೂ ಬೆಂಗಳೂರು ಅರಮನೆಯನ್ನು ಹೋಟಲ್ಲಾಗಿ ಮಾಡುವುದು ಅಷ್ಟು ಒಳ್ಳೆಯದಲ್ಲ ಅದಕ್ಕೆ ಒಂದು ಹಿನ್ನಲೆ ಇದೆ, ಟ್ರೆಡಿಷನ್ ಇದೆ. ಅದನ್ನು ಹೋಟಲ್ಲಾಗಿ ಮಾಡುವುದು ಯೋಗ್ಯವೂ ಅಲ್ಲ, ಅದಕ್ಕೆ ಅವಕಾಶ ಕೊಡುವುದು ಸಾಧುವೂ ಅಲ್ಲ ಎನ್ನುವುದು ಅವರ ಅಭಿಪ್ರಾಯ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ, ನಾನು ಹೋಟಲ್ ಆಗಬಾರದು ಎನ್ನುವವನೂ ಅಲ್ಲ, ಆಗಲೇ ಬೇಕು ಎಂದು ಹೇಳುವವನೂ ಅಲ್ಲ. ವೈಯುಕ್ತವಾಗಿ ಇದನ್ನೆಲ್ಲ ಹಾಗೆಯೇ ಇಟ್ಟು ಒಂದು ದೊಡ್ಡ ವನವನ್ನಾಗಿ ಪರಿವರ್ತಿಸಿ ಸಾರ್ವಜನಿಕರು ಅದನ್ನು ನೋಡುವುದಕ್ಕೆ, ಆನಂದಿಸುವುದಕ್ಕೆ ಅವಕಾಶ ಮಾಡಿದರೆ ಉತ್ತಮ. ಬೇರೆ ಬೇರೆ ಕಡೆ ಪಟ್ಟಣಗಳಲ್ಲಿ, ಅದರಲ್ಲಿಯೂ ಪಾಶ್ಚಿಮಾತ್ಯ ದೇಶಗಳಲ್ಲಿ ಕೆಲವು ಇಂತಹ ಉದ್ಯಾನವನಗಳನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಅಲ್ಲಿ ಅದಕ್ಕೆ ಸುತ್ತ ಕಾಂಪೌಂಡ್ ಹಾಕಿ ಇಟ್ಟುಕೊಂಡಿದ್ದಾರೆ. ಜನರು ಒಳಗಡೆ ಹೋಗಬೇಕಾದರೆ ಗೇಟ್ ಮನಿ ಕಲೆಕ್ಟ್ ಮಾಡುತ್ತಾರೆ. ಹಾಗೆ ಬಂದಂಥ ಹಣದಿಂದ ಆ ತೋಟಗಳನ್ನು, ಬೃಂದಾವನಗಳನ್ನು ಅಲ್ಲಿ ಮೇಂಟೇನ್ ಮಾಡುತ್ತಾರೆ. ಬೆಂಗಳೂರ್ ಅರಮನೆಗೆ ಕಾಂಪೌಂಡ್ ಕೂಡ ಇದೆ. ಅದನ್ನು ನಾವು ತೆಗೆದುಕೊಂಡರೆ ಒಳ್ಳೆಯ ರೀತಿಯಿಂದ ಮಾಡುವುದಕ್ಕೆ ನನಗೆ ಆಸಕ್ತಿ ಇದೆ. ನನಗೆ ಕೈ ಹಿಡಿಯುತ್ತಿರುವುದು ಏನೆಂದರೆ ನಮ್ಮಲ್ಲಿ ದುಡ್ಡು ಇಲ್ಲದೆ ಇರುವುದು. ಅದಕ್ಕೆ ನಮ್ಮ ಸದಸ್ಯರು ಹೇಳಿದಂಥ ರೀತಿಯಲ್ಲಿ ಆದರೆ ದುಡ್ಡು ಬೇಕಾಗಿಲ್ಲ. ಎಲ್ಲವನ್ನೂ ನಾವು ಮುಟ್ಟುಗೋಲು ಹಾಕಿ ಕೊಂಡಿದ್ದೇವೆ ಅಥವಾ ಸರ್ಕಾರದವರೇ ಎಲ್ಲ ತೆಗೆದುಕೊಂಡಿದ್ದಾರೆ. ನ್ಯಾಷನಲೈಸ್ ಮಾಡಿದ್ದಾರೆ ಎಂದು ಏನಾದರೂ ಹೇಳಬಹುದು. ಅದರೆ ಈಗಿರುವ ಕಾನೂನುಗಳಲ್ಲಿ ಹಾಗೆ ಮಾಡುವುದಕ್ಕೆ ಬರುವುದಿಲ್ಲ ಎಂದು ನನ್ನ ತಿಳುವಳಿಕೆ. ಮತ್ತೆ ಅದನ್ನು ಮಾಡಬೇಕಾದರೆ ಕೇಂದ್ರ ಮತ್ತು ನಾವು ಆಲೋಚನೆ ಮಾಡಿ ಅದಕ್ಕೆ ಬೇಕಾದಷ್ಟು ಪ್ರವರಗಳು ವಿವರಗಳು ಬೇಕು. ಬ್ಯಾಂಕುಗಳ ರಾಷ್ಟ್ರೀ ಕರಣ ನಡೆಯಿತು. 14 ಬ್ಯಾಂಕುಗಳನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡರು, ಅವು ಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಆಗಲಿಲ್ಲ. ಅದಕ್ಕೆ ಕಾಂಪೆನ್‌ಸೇಷನ್ ಸಹ 24 ಕೋಟಿ ರೂಪಾಯಿ ಕೊಟ್ಟರು. ಪ್ರಥಮ ಹಂತದಲ್ಲಿ ಅಷ್ಟು ಕೊಟ್ಟರು. ಆಮೇಲೆ ಬ್ಯಾಂಕುಗಳವರು ಸುಪ್ರೀಂ ಕೋರ್ಟಿಗೆ ಹೋದರು. ಅಲ್ಲಿ ಕೇಂದ್ರ ಸರ್ಕಾರ ಕೊಟ್ಟಿರುವಷ್ಟು ಹಣ ಸರಿಯಲ್ಲ. ಅವರು ಬಹಳ ಕಡಮೆ ಬೆಲೆ ಕಟ್ಟಿದ್ದಾರೆ ಎಂದು 80 ಕೋಟಿ ರೂಪಾಯಿಗಳಿಗೆ ಏರಿಸಿದರು. ಆದೇ ಸಂದರ್ಭ ದಲ್ಲಿ ಕೇಂದ್ರ ಸರ್ಕಾರದವರು ಮತ್ತು ನಮ್ಮ ಪಕ್ಷದವರು ಯೋಚನೆ ಮಾಡಿದ್ದು. ಬ್ಯಾಂಕ್ ರಾಷ್ಟ್ರೀ ಕರಣದ ಕೇಸು ನಮ್ಮ ತೀರ್ಮಾನವನ್ನು ಪುಷ್ಟೀಕರಿಸಿತು. ಆಗ ತೀವ್ರವಾಗಿ ಯೋಚನೆ ಮಾಡಿ ನಾವು ಮಾರುಕಟ್ಟೆ ಬೆಲೆ ಎನ್ನುವುದನ್ನು ಯಾವ ರೀತಿ ನಿಗದಿ ಮಾಡಿದರೂ ಖಾಸಗಿ ಜನರು ಕೋರ್ಟ್ ಮುಖೇನ ಹೋಗಿ ಅದು ಸರಿಯಲ್ಲ ಎನ್ನುವುದಕ್ಕೆ ಅವಕಾಶವಿದೆ, ಇನ್ನೂ ಹೆಚ್ಚಾಗಿ ಬೆಲೆ ಕಟ್ಟಿಸು ವುದಕ್ಕೆ ಅವಕಾಶವಿದೆ ಎನ್ನುವುದು ಸ್ಪಷ್ಟವಾಗುತ್ತಿದೆ. ಆ ರೀತಿ ನಾವು ಹೋದರೆ ಈ ದೇಶದಲ್ಲಿ ಸಾಧಾರಣ ಜನರಿಗೆ ಯಾವುದೇ ರೀತಿಯಿಂದ ಸಹಾಯವಾಗತಕ್ಕ ಯೋಗ್ಯ ಕಾರ್ಯಕ್ರಮಗಳನ್ನು ಮಾಡು ವುದಕ್ಕೆ ಇದು ದೊಡ್ಡ ಅಡಚಣೆ. ಭೂಸುಧಾರಣಾ ಕಾನೂನಿಗೆ ಇದು ಒಂದು ದೊಡ್ಡ ಅಡಚಣೆ ಎಂದು ತಿಳಿದೇ ಇದನ್ನು ಕಾನ್‌ಸ್ಟಿಟ್ಯೂಷನ್‌ನಲ್ಲಿ ಬದಲಾವಣೆ ಮಾಡಬೇಕು ಎಂದು ಹೊರಟಿದ್ದು. ಅದನ್ನೇ ಈಗ ತಾವು ಹೇಳಿದ್ದು, ರಾಜ್ಯಾಂಗದ 25ನೇ ತಿದ್ದುಪಡಿ ಎಂದು. ಈ ತಿದ್ದುಪಡಿಯ ಪ್ರಕಾರ ಯಾವು ದನ್ನೇ ಆಗಲೀ, ನಾವು ಕಾಂಪೆನ್‌ಸೇಷನ್ ಕೊಡದ ಹಾಗೆ ಆಸ್ತಿಯನ್ನು ತೆಗೆದುಕೊಳ್ಳಬೇಕು ಎಂದು

ಎಲ್ಲಿಯೂ ಅಧಿಕಾರ ಕೊಟ್ಟಿಲ್ಲ. ಆದರೆ ಯಾವುದೇ ಒಂದು ಆಸ್ತಿಯನ್ನು ಸರ್ಕಾರ ಸಾರ್ವಜನಿಕರ ಉಪಯೋಗಕ್ಕಾಗಿ ತೆಗೆದುಕೊಂಡರೆ, ಆ ಆಸ್ತಿಗೆ ಎಷ್ಟು ಪರಿಹಾರವನ್ನು ಕೊಡಬೇಕು ಎನ್ನುವಾಗ ಕೋರ್ಟಿಗೆ ಹೋಗಿ ಅಲ್ಲಿ ತೀರ್ಮಾನವಾಗುವ ಅವಕಾಶವನ್ನು ಕೊಡುವುದಿಲ್ಲ. ಒಂದು ಸಾವಿರ ರೂಪಾಯಿ ಕೊಡಬೇಕು ಎನ್ನುವ ಆಸ್ತಿಗೆ 100 ರೂಪಾಯಿ ಕೊಡಬಹುದು ಎಂದು ತೀರ್ಮಾನ ಮಾಡಬಹುದು. ಅದರ ಮೇಲೆ ಕೋರ್ಟಿಗೆ ಹೋಗುವುದಕ್ಕೆ ಅವಕಾಶವಿಲ್ಲ. ಕೋರ್ಟುಗಳ ವ್ಯಾಪ್ತಿಯಿಂದ ಅದನ್ನು ದೂರವಿಟ್ಟಿದ್ದಾರೆ, ಆ ಕಾನೂನು ಪ್ರಕಾರ. ಇದನ್ನೇ ನಿನ್ನೆ ದಿವಸ ಯೂನಿಯನ್ ಮಿನಿಸ್ಟರ್ ಆಫ್ ಸ್ಟೇಟ್ ಮೋಹನ್ ಧಾರಿಯಾ ಅವರು ಹೇಳಿರುವುದು. ಸ್ಟೇಟ್ ಲೆಜಿಸ್ಲೇಚರ್‌ನವರು ಇದರ ಉಪಯೋಗವನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾದರೆ ಇಲ್ಲಿ ನಾವು ಲೆಜಿಸ್ಲೇಷನ್ ಮಾಡಬೇಕು. ಯಾವ ರೀತಿಯ ಕಾಂಪನ್‌ಸೇಷನ್ ಕೊಡಬೇಕು, ಅದಕ್ಕೆ ಒಂದು ರೀತಿ, ನೀತಿ, ಕಾನೂನು ಇವೆಲ್ಲ ಮಾಡಬೇಕಾಗುತ್ತದೆ. ಹಾಗಿಲ್ಲದೆ ಮನಸ್ಸಿಗೆ ಬಂದಂತೆ ನೂರು ರೂಪಾಯಿ ಆಸ್ತಿಗೆ ಐದು ರೂಪಾಯಿ ಕೊಡುತ್ತೇನೆ ಅಥವಾ ನೂರು ರೂಪಾಯಿ ಆಸ್ತಿಗೆ ಒಂದು ಸಾವಿರ ರೂಪಾಯಿ ಕೊಡುತ್ತೇನೆಂದು ಹೇಳಬಹುದು. ಎರಡು ರೀತಿಯೂ ಇದೆ. ಅದಕ್ಕೋಸ್ಕರವೇ ಇದನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕು ಎನ್ನುವುದಕ್ಕೆ ಒಂದು ಲೆಜಿಸ್ಲೇಷನ್ ಆಗಬೇಕು. ಈ ಆಸ್ತಿಗಳನ್ನು ನಾವು ಅಕ್ವೈರ್ ಮಾಡುತ್ತೇವೆಯೋ, ಕೊಂಡುಕೊಳ್ಳುತ್ತೇವೆಯೋ, ಅದಕ್ಕೆ ಆ ಮೇಲೆ ಬರುತ್ತೇನೆ. ಏನು ಮಾಡಿದರೂ ನಾವು ಕಾಂಪೆನ್‌ಸೇಷನ್ ಕೊಡಲೇ ಬೇಕು. ಆ ಹಣವನ್ನು ಕೊಡಬೇಕಾದರೆ, ನಾನು ಶ್ರೀ ಹನುಮಂತಯ್ಯನವರ ಸಂಗಡ ಹೇಳಿದೆ, ನಮ್ಮ ಹತ್ತಿರ ಹಣವಿಲ್ಲ ಕೇಂದ್ರ ಸರ್ಕಾರದಿಂದ ಸಹಾಯ ಮಾಡಬೇಕು, ಅದನ್ನು ಯೋಚನೆ ಮಾಡಿ ಎಂದು ಹೇಳಿದೆ. ಆಗಲಿ ನಾನು ಕೇಂದ್ರದಲ್ಲಿ ಇತರ ಮಂತ್ರಿಗಳ ಸಂಗಡ ಮಾತನಾಡುತ್ತೇನೆ ಎಂದು ಹೇಳಿದರು. ಮತ್ತು ಏನಾದರೂ ಒಂದು ಸಂದರ್ಭದಲ್ಲಿ ದುಡ್ಡು ಸಿಕ್ಕಲಿಲ್ಲವೆಂದರೆ, ನಾನು ಬಹುಶಃ ರೈಲ್ವೆ ಮಿನಿಸ್ಟ್ರಿಯಿಂದ ಇದಕ್ಕೆಲ್ಲ ದುಡ್ಡು ಕೊಟ್ಟಾದರೂ ತೆಗೆದುಕೊಳ್ಳುತ್ತೇನೆ, ನಾನು ತೆಗೆದುಕೊಂಡರೆ ಗಾರ್ಡನ್ ಆಗಿ ಇಡುವುದಕ್ಕಾಗುವುದಿಲ್ಲ, ಅಲ್ಲಿ ಒಂದು ದೊಡ್ಡ ರೈಲ್ವೆ ಸ್ಟೇಷನ್ ಮಾಡೋಣ ಎಂದು ಹೇಳಿದರು. ಏನಾದರೂ ಮಾಡಿ, ನಾವು ಈ ತೀರ್ಮಾನ ತೆಗೆದುಕೊಂಡಿದ್ದೇವೆ. ನಮಗೆ ಹಣದ ಅಭಾವವಿರುವುದರಿಂದ, ತೊಂದರೆ ಇರುವುದರಿಂದ ಇನ್ನು ಯಾವುದಾದರೂ ರೀತಿ ಯೋಚನೆ ಮಾಡಿ ಗಾರ್ಡನ್ ವಗೈರೆ ಮಾಡುತ್ತೇವೆಂದರೆ ಯಾರಾದರೂ ಬ್ಯಾಂಕಿನವರು ದುಡ್ಡು ಕೊಡುವುದಾದರೆ, ಅದನ್ನೂ ಸ್ವಲ್ಪ ಯೋಚನೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ರೈಲ್ವೆ ಮಂತ್ರಿಗಳು ದೊಡ್ಡ ರೈಲ್ವೆ ಸ್ಟೇಷನ್ ಮಾಡೋಣ ಎಂದು ಹೇಳಿದರು. ಇರಿಗೇಷನ್ ಮಿನಿಸ್ಟರಾಗಿದ್ದರೆ ದೊಡ್ಡ ಕೆರೆ ಮಾಡೋಣ ಎಂದು ಹೇಳುತ್ತಿದ್ದರು ಎಂದು ಕಾಣುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಆಮೇಲೆ, ಬ್ಯಾಂಕುಗಳಿಂದ ಏನಾದರೂ ಲಾಂಗ್ ಟರ್ಮ್ ಸಾಲ ಸಿಕ್ಕುತ್ತದೆಯೋ ಎಂದು ನೋಡಿದೆವು. ಅದು ಏತಕ್ಕೆ ಎಂದರೆ, ಅಲ್ಲಿ ಒಂದು ಗಾರ್ಡನ್ ಮಾಡಿ, ತುಂಬಾ ಅಟ್ರ್ಯಾಕ್ಷನ್ ಇಟ್ಟು, ಜನಗಳು ದುಡ್ಡು ಕೊಟ್ಟು ಒಳಗಡೆ ನೋಟ ನೋಡುವ ಹಾಗೆ ಮಾಡಿದರೆ ಸಕ್ಸಸ್ ಆಗುತ್ತದೆಯೇ, ಈ ರೀತಿ ಮಾಡಬಹುದೇ ಇದನ್ನೆಲ್ಲಾ ಯೋಚನೆ ಮಾಡಬೇಕಾಗುತ್ತದೆ. ದಯವಿಟ್ಟು ನೀವೂ ಯೋಚನೆ ಮಾಡಿ, ನಾನು ಅಷ್ಟರೊಳಗೆ ಈ ವಿಷಯ ಸ್ಟಡಿ ಮಾಡಿ, ಡೆಲ್ಲಿಗೆ 21ನೇ ತಾರೀಖು ಬರುತ್ತಿದ್ದೇನೆ, ಇದರ ಬಗ್ಗೆ ಮತ್ತೆ ಪ್ರಸ್ತಾಪ ಮಾಡೋಣ ಎಂದು ಹೇಳಿದೆ. ಏತನ್ಮಧ್ಯೆ ಈ ವಿಚಾರಗಳು ಬಂದಮೇಲೆ ಮಾತನಾಡುತ್ತೇನೆ, ತಡೆಹಿಡಿಯಿರಿ ಎಂದು ಹೇಳಿದ್ದರು. ಆ ರೀತಿ ತಡೆದು ಇಟ್ಟಿದ್ದೇನೆ. ವಿಚಾರ ಬಂತು, ಬರುವುದಕ್ಕೆ ಮುಂಚಿತವಾಗಿ ಚೀಫ್‌ಸೆಕ್ರೆಟರಿಯವರನ್ನು ಮಹಾರಾಜರ ಹತ್ತಿರ ಪ್ರಸ್ತಾಪ ಮಾಡಿ ಅದನ್ನು ಕೊಡುವುದಕ್ಕೆ ಅವರು ಏನು ಹೇಳುತ್ತಾರೆ, ಅವರ ಅಭಿಪ್ರಾಯ ಏನು ಇದೆ ಮಾತನಾಡಿಕೊಂಡು ಬನ್ನಿ ಎಂದು ನಾನು ಅವರನ್ನು ಕಳುಹಿಸಿದೆ. ಚೀಫ್ ಸೆಕ್ರೆಟರಿಯವರಿಂದ ನನಗೆ ಇನ್ನೂ ವರದಿ ಬಂದಿಲ್ಲ. ಇದುವರೆಗೂ ನಡೆದಿರತಕ್ಕ ವಿಚಾರ ಇಷ್ಟೆ; ಇಷ್ಟು ವಿಷಯಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಅಲ್ಲಿಂದ ಈಚೆಗೆ ನಡೆಯತಕ್ಕಂಥ ವಿದ್ಯಮಾನಗಳು ಏನು ಇವೆ, ಕೇಂದ್ರದವರು ಪ್ರಸ್ತಾಪ ಮಾಡಿ ಯಾವ ರೀತಿ ಇದರ ಬಗ್ಗೆ ಸಲಹೆ ಕೊಡುತ್ತಾರೆ ಇದನ್ನೆಲ್ಲಾ ಗಮನಿಸುವುದು ಒಂದು ಕಡೆ. ಮತ್ತೆ ಇನ್ನೊಂದು ಕಡೆ ಏನು ಅಂದರೆ ಈಗ ಕೇಂದ್ರದವರ ಅಭಿಪ್ರಾಯದಲ್ಲೂ ಬಹುಶಃ ನಮ್ಮ ದೇಶದ ಅಭಿಪ್ರಾಯದಲ್ಲೂ ಮಹಾರಾಜರಿಗೆ ಏನೂ ಕೊಡದ ಹಾಗೆ ಎಲ್ಲವನ್ನೂ ತೆಗೆದುಕೊಂಡು ಬಿಡಬೇಕು ಎಂದು ಇಲ್ಲ. ನಮ್ಮ ದೇಶದಲ್ಲಿ ಜನತೆ ಮಹಾರಾಜರಿಗೆ ಅವರ ಜೀವಿತ ಕಾಲದಲ್ಲಿ ಅವರ ಮಕ್ಕಳು ಅಥವಾ ಅವರ ಕುಟುಂಬಕ್ಕೆ ಒಂದು ರೀತಿಯಾಗಿ ಅವರು ಬಾಳುವೆ ಮಾಡುವಂತೆ ಕೆಲವು ಏರ್ಪಾಡುಗಳನ್ನು ನಾವು ಮಾಡುವುದಕ್ಕೆ ಸಹಾಯ ಮಾಡಿದರೆ, ನನಗೆ ತಿಳುವಳಿಕೆ ಇರುವ ಹಾಗೆ, ದೇಶದ ಜನತೆ ಇದನ್ನು

(ಶ್ರೀ ಡಿ. ದೇವರಾಜ ಅರಸ್)

ಬೇಡ ಎಂದು ಹೇಳುವುದಿಲ್ಲ. ಅವರು ಒಪ್ಪುತ್ತಾರೆ, ಅಥವಾ ಮೆಚ್ಚುತ್ತಾರೆ ಎಂದು ನನ್ನ ತಿಳುವಳಿಕೆ. ಆದರೆ ಒಂದು ವಿಚಾರ, ಈಗ ಕೇಂದ್ರಕ್ಕೂ ಗೊತ್ತಿದೆ ನಮಗೂ ಗೊತ್ತಿದೆ, ಡೀಟೇಲ್ಸ್ ಅನ್ನು ನಾನು ಹೇಳುವುದು ಅಷ್ಟು ಸರಿಯಲ್ಲ. ಬೇರೆ ರಾಜಮಹಾರಾಜರುಗಳ ವಿಚಾರ ಏನಾದರೂ ಇರಲಿ, ನಮ್ಮ ಮೈಸೂರು ರಾಜರ ಇವತ್ತಿನ ಪರಿಸ್ಥಿತಿ ಏನಾಗಿದೆ ಅಂದರೆ, ಸ್ವಲ್ಪ ಚಿಂತಾಜನಕವಾಗಿದೆ. ಅವರಿಗೆ ಮನೆ ಇರಬಹುದು, ಸಾಮಾನು ಇರಬಹುದು, ಅವರ ಜೀವನ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ. ಮತ್ತೆ ಅನೇಕ ಕಮಿಟ್‌ಮೆಂಟ್ಸ್, ಸಾಲ ಸೋಲ ಇದೆ ಎಂದು ಅವರೇ ಹೇಳುತ್ತಿದ್ದಾರೆ. ಏತನ್ಮಧ್ಯೆ, ಮೈಸೂರಿನಲ್ಲಿರತಕ್ಕ ಪ್ರಾಪರ್ಟೀಸ್ ಅನ್ನು ಅಲ್ಲಿ ಇಲ್ಲಿ ಕೊಡುವುದಕ್ಕೆ ಶುರು ಮಾಡಿದಾಗ, ನಾನು ಹೇಳಿದೆ, ಇವನ್ನು ಕೊಡಬೇಡಿ, ಸರ್ಕಾರ ತೆಗೆದು ಕೊಳ್ಳಬೇಕು, ಯಾರು ಯಾರೋ ತೆಗೆದುಕೊಂಡು ಹಾಳು ಮಾಡಿಬಿಟ್ಟಾರು ಎಂದು. ಅರಮನೆ ಸುತ್ತ ಆವರಣ ಕೋಟೆ ಹೊರಭಾಗವನ್ನು ಲೀಸ್ ಮಾಡಿ ಕೊಡಲಿಕ್ಕೆ ಹೊರಟಿದ್ದರು, ಇತ್ತೀಚೆಗೆ ನಾನು ಹೋಗಿ ಇದನ್ನು ಕೊಡುವುದಕ್ಕೆ ನಾನು ಒಪ್ಪುವುದಿಲ್ಲ, ಕೆಲವು ಪ್ರಾಪರ್ಟಿಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಹೇಳಿದೆ. ಯಾರೋ ಕಾಲೇಜು ಮಾಡುವುದಕ್ಕೆ ತೆಗೆದುಕೊಂಡಿದ್ದಾರೆ ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ನಾವು ಇದನ್ನು ಒಪ್ಪುವುದಕ್ಕೆ ಆಗುವುದಿಲ್ಲ, ಸರ್ಕಾರಕ್ಕೆ ಬೇಕಾದ ಬಿಲ್ಡಿಂಗ್ ಇದೆ, ಅಲ್ಲಿ ಸರ್ಕಾರದ ಇಲಾಖೆಯವರು ಇದ್ದಾರೆ, ಅವನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು. ತೆಗೆದುಕೊಳ್ಳುವುದಕ್ಕೆ ನಾನು ಆಗಲೇ ನಮ್ಮ ಚೀಫ್ ಸೆಕ್ರೆಟರಿಯವರಿಗೆ ಅದರ ಒಂದು ಎಸ್ಟಿಮೇಟ್ ಅನ್ನು ಪಿ.ಡಬ್ಲ್ಯೂ.ಡಿ. ಯಿಂದ ಮಾಡಿಸಿ, ಆಮೇಲೆ ಮಾತನಾಡೋಣ ಎಂದು ಹೇಳಿದ್ದೇನೆ. ಆ ಕಾರ್ಯ ನಡೆಯುತ್ತಿದೆ. ಮತ್ತೆ ದೊಡ್ಡ ಕೆರೆ ಮುಂಭಾಗದಲ್ಲಿ ಮೈದಾನ ಇದೆ ಅದು ಪ್ಯಾಲೇಸ್‌ಗೆ ಸೇರಿದ್ದು ಎಂದು ಹೇಳುತ್ತಾರೆ, ಇಲ್ಲ ಎಂದೂ ಹೇಳುತ್ತಾರೆ, ನನಗೆ ಅದು ಗೊತ್ತಿಲ್ಲ. ನನಗೆ ಹೇಳಿದ ಪ್ರಕಾರ, ಪೂರ್ಣವಾಗಿ ಸರ್ಕಾರಕ್ಕೆ ಅದನ್ನು ಬಿಟ್ಟಿದ್ದಾರೆ ಎಂದು ಅವರು ಹೇಳುತ್ತಾ ಇದ್ದಾರೆ, ಬಿಟ್ಟೂ ಬಿಟ್ಟಿದ್ದಾರೆ. ಅರಮನೆ ಮುಂದೆ ಇರತಕ್ಕ ಮೈದಾನವನ್ನು ತೆಗೆದುಕೊಂಡು ಒಂದು ಭಾಗದಲ್ಲಿ ಎಕ್ಸಿಬಿಷನ್ ಗ್ರೌಂಡ್ಸ್ ಮಾಡೋಣ ಎಂದು ಇದೆ. ಈಗ ಎಕ್ಸಿಬಿಷನ್ ನಡೆಯುತ್ತಾ ಇದ್ದಂಥ ಪ್ರದೇಶವನ್ನು ಬಹಳ ದಿವಸಗಳಿಂದ ಮೆಡಿಕಲ್ ಕಾಲೇಜಿಗೆ ಕೇಳುತ್ತಾ ಇದ್ದಾರೆ. ಅದನ್ನು ಮೈಸೂರು ಮೆಡಿಕಲ್ ಕಾಲೇಜ್ ಎಕ್ಸ್‌ಪ್ಯಾನ್‌ಷನ್‌ಗೆ ಅವಕಾಶವಿಲ್ಲದ ಕಾರಣ ಅವರಿಗೆ ಕೊಟ್ಟುಬಿಡೋಣ. ಪ್ಯಾಲೇಸ್ ಫೀಸ್ಟ್, ನವರಾತ್ರಿ ಹಬ್ಬ ಮಾಡಬೇಕಾದರೆ, ಅದರ ಅಂಗವಾಗಿ ಎಕ್ಸಿಬಿಷನ್ ನಡೆಯಬೇಕಾದರೆ ಉಳಿದಿರುವ ದೊಡ್ಡ ಕೆರೆ ಮೈದಾನದಲ್ಲಿ ಮಾಡೋಣ ಎನ್ನುವ ಯೋಚನೆ ಇದೆ. ಅಲ್ಪಸ್ವಲ್ಪ ಉಳಿದಿರತಕ್ಕ ರಾಯನಕೆರೆ ಡೈರಿ ಫಾರಂ ಪ್ರಾಪರ್ಟಿ ಇದೆ. ಅಲ್ಲಿ ನಮ್ಮ ಸರ್ಕಾರ ಡೈರಿ ಫಾರಂ ಹಾಕಿಕೊಳ್ಳುವುದಕ್ಕೆ ಉಪಯೋಗಿಸೋಣ ಎಂದು ನಾವು ಯೋಚನೆ ಮಾಡುತ್ತಿದ್ದೇವೆ. ಇನ್ನು ಬನ್ನಿಮಂಟಪ ದೊಡ್ಡ ಮೈದಾನ ಇದೆ, ಅದನ್ನು ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಆಕ್ವೈರ್ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ, ಅದಕ್ಕೆ ನಮ್ಮ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಹೀಗೆ ಮೈಸೂರಿನ ಅರಮನೆ ಟ್ರಸ್ಟ್ ಮಾಡಬೇಕು ಎಂದು ಬರೆದಾಗ, ಅವರು ಒಪ್ಪಿದ ಮೇಲೆ ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ. ಉಳಿದಿರುವುದು ಊಟಿಯಲ್ಲಿರುವ ಅರಮನೆ ಅಲ್ಲಿ ನಮಗೆ ಸಂಬಂಧ ಇಲ್ಲದಿರುವುದರಿಂದ ನಾವು ತೆಗೆದುಕೊಳ್ಳಬೇಕು ಎನ್ನುವ ಇಚ್ಛೆಯೂ ಇಲ್ಲ ಇನ್ನು ಕೇಂದ್ರ ಸರ್ಕಾರದವರು ಇದರ ಮೇಲೆ ಏನು ಹೇಳುತ್ತಾರೆ ಎನ್ನುವುದನ್ನು, ನಾನು ಮತ್ತೆ ಅವರಲ್ಲಿ ಪ್ರಸ್ತಾಪ ಮಾಡಿದ ಮೇಲೆ ಅವರು ಇದರ ಬಗ್ಗೆ ನಮಗೆ ಯಾವ ರೀತಿಯ ಸಹಾಯ ಮಾಡುತ್ತಾರೆ ಎಂದು ತಿಳಿದು ಮುಂದಿನ ಕಾರ್ಯಕ್ರಮ ನಡೆಸಬೇಕಾಗಿದೆ. ಒಂದು ವಿಚಾರ ಎಂದರೆ, ಬೆಂಗಳೂರು ಅರಮನೆಗೆ ಸಂಬಂಧಪಟ್ಟಿರತಕ್ಕ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲದೆ, ಅಕ್ವೈರ್ ಮಾಡಿಕೊಳ್ಳಬಹುದು. ಇದನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಕೇಂದ್ರಸರ್ಕಾರ ಕಾನೂನು ಪ್ರಕಾರ ಅಡ್ಡಿ ಬರುವುದಕ್ಕಾಗುವುದಿಲ್ಲ. ಅದಕ್ಕೆ ಬೇರೆ ಸ್ಪೆಷಲ್ ಆಕ್ಟ್ ಮಾಡುವುದಕ್ಕೆ ಸಾಧ್ಯವೇ, ಅದನ್ನು ನಾನು ಎಕ್ಸಾಮಿನ್ ಮಾಡುತ್ತಿದ್ದೇನೆ. ಆದ್ದರಿಂದ ನಾವು ಇದನ್ನು ನೇರವಾಗಿ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಈ ಒಪ್ಪಂದ ಏನು ಇದೆ, ಕೇಂದ್ರದವರು ಒಪ್ಪಿಗೆ ಕೊಟ್ಟಿರುವ ವಿಚಾರ ಏನು ಇದೆ, ಅದರಿಂದ ಯಾವ ರೀತಿಯ ಅಡಚಣೆ ಬರುವ ಹಾಗಿಲ್ಲ, ದುಡ್ಡು ಕೊಡಬೇಕಾಗುತ್ತದೆ. ಇನ್ನು ಇದು ಸ್ಟೇಟ್ ಪ್ರಾಪರ್ಟಿ ಮಾಡಲಿಕ್ಕೆ ಅವರು ಒಪ್ಪಿದರೆ, ತಾವು ಹೇಳಿದ ಹಾಗೆ, ನಮ್ಮದೇ ಇದು, ನಿಮ್ಮದು ಅಲ್ಲ, ಎಂದು ಹೇಳಬಹುದಿತ್ತು.

Sri C. M. ARUMUGAM.—Sri Veerendra Patil has stated that this property cannot be alienated and that so long the Maharaja and his family live he has that much of privilege. When once the privilege is taken away, naturally it comes to the Government.

ಶ್ರೀ ಡಿ. ದೇವರಾಜ ಅರಸ್.—ಅವರ ಅಭಿಪ್ರಾಯ ತಿಳಿದೇ ಕಾಗದ ಬರೆದಿರುವುದು. That is what I am saying ಅವರು ಲಿಸ್ಟ್ ಕೊಡಿ ಎಂದು ಹೇಳಿದ್ದಾರೆ We are glad to give ಎಂದು ಹೇಳಿದ್ದೇನೆ. We have taken a decision, this is a decision. ಇಷ್ಟು ವಿವರಣೆಗಳನ್ನು ಕೊಟ್ಟಿದ್ದೇನೆ, ಮತ್ತು ನಾನು ಯಾವುದನ್ನು ಬಚ್ಚಿಟ್ಟು ಮಾತನಾಡಿಲ್ಲ. ಬಚ್ಚಿಡ ಬೇಕಾದ ಅಗತ್ಯವೂ ನನಗೆ ಇಲ್ಲ. ಒಂದು ವಿಚಾರದಲ್ಲಿ ನನಗೆ ಧೈರ್ಯವಿದೆ, ಯಾವುದೇ ರೀತಿಯ ದಾಕ್ಷಿಣ್ಯವನ್ನು ನನ್ನ ರಾಜಕೀಯ ಜೀವನದಲ್ಲಿ ಸೇರಿಸುವುದಕ್ಕೆ ಅವಕಾಶ ಕೊಟ್ಟಿಲ್ಲ. ಈಗಲೂ ಕೊಡುವವನಲ್ಲ, ಮುಂದೆಯೂ ಕೊಡುವವನಲ್ಲ. ಆದ್ದರಿಂದ ನಾನು ಯಾವುದನ್ನೂ ಬಚ್ಚಿಡ ಬೇಕಾದ ಅಗತ್ಯ ಏನೂ ಇಲ್ಲ. ಯಾರಿಂದಲೂ ನಾನು ಯಾವುದೇ ಒಂದು ರೀತಿಯಾದ ಪದವಿ ಯನ್ನಾಗಲೀ ಆಸ್ತಿಯನ್ನಾಗಲೀ ಪಡೆಯಬೇಕಾದಂಥ ಇಚ್ಛೆ ಖಂಡಿತವಾಗಿ ನನಗೆ ಇಲ್ಲ. ಈ ದೇಶದಲ್ಲಿ ಆಸ್ತಿ ಮೇಲೆ ಮಿತಿ ಇಡಬೇಕು ಎಂದು ನಾನು ಒಬ್ಬನೇ ಹೇಳಲಿಲ್ಲ. ಅನೇಕರು ಹೇಳಿ ಕೊಂಡು ಬಂದಿದ್ದಾರೆ. ಅದನ್ನು ನಾನೂ ಹೇಳುತ್ತಾ ಇದ್ದೇನೆ. ಆದ್ದರಿಂದ ಈ ಒಂದು ಕೀರ್ತಿಯೋ ಅಪಕೀರ್ತಿಯೋ ಒಬ್ಬನಿಗೆ ಸೇರಿದ್ದು ಅಲ್ಲ. ಅದು ಕೀರ್ತಿಯಾಗಲೀ ಅಪಕೀರ್ತಿಯಾಗಲೀ ಹೇಳುತ್ತಾ ಬಂದಿದ್ದೇನೆ, ಈಗಲೂ ಹೇಳುತ್ತಿದ್ದೇನೆ, ನಾಳೆಯೂ ಹೇಳುತ್ತೇನೆ. ಆದರೆ ಸರ್ಕಾರ ನಡೆಯುತ್ತಾ ಯಿರುವುದು ಒಂದು ಕಾನೂನಿನ ಚೌಕಟ್ಟಿನಲ್ಲಿ. ಆದ್ದರಿಂದ ಈ ಚೌಕಟ್ಟು ಬಿಟ್ಟು ಹೋಗುವುದಕ್ಕೆ ಕಷ್ಟವಾಗುತ್ತದೆ. ಈಗ ಮಹಾರಾಜರಿಗೆ ಇಂತಹ ಒಂದು ಸನ್ನಿವೇಶ ಬಂದು ಬಿಟ್ಟಿದೆ. ಅದರ ಬಗ್ಗೆ ಚಿಂತನೆ ಮಾಡಬೇಕಾಗಿಲ್ಲ. ಯಾರ ಮೇಲೂ ದೂಷಣೆ ಮಾಡಬೇಕಾಗಿಲ್ಲ, ತಪ್ಪು ಹೊರಿಸುವುದಕ್ಕೆ ಕಾರಣವಿಲ್ಲ. ನಾವು ಈಗ ಒಂದು ಸಂಧಿಕಾಲದಲ್ಲಿದ್ದೇವೆ ಅದಕ್ಕೆ ತಮಗೆ ಒಂದು ದೃಷ್ಟಾಂತವನ್ನು ಕೊಡುತ್ತೇನೆ. ಮಹಾ ಭಾರತದಲ್ಲಿ ಅದು ಬಂದಿದೆ. ಒಂದು ಸಾಯಂಕಾಲ ಕರ್ಣನನ್ನು ಶ್ರೀ ಕೃಷ್ಣ ಕರೆದುಕೊಂಡು ಹೋಗುತ್ತಾನೆ. ಸೂರ್ಯ ಮುಳುಗುತ್ತಾ ಇದ್ದಾನೆ. ಕತ್ತಲೆ ಬೆಳಕು ಎರಡೂ ಇದೆ. ಸಂಧ್ಯಾಕಾಲ ಮತ್ತು ಸಂಧಿಕಾಲ. ಸಂಧಿಕಾಲದ ನಡುವೆ ಏನು ಮಾತ ನಾಡಿದರೂ ಹುತ್ತದ ಪಕ್ಕದಲ್ಲಿ ಹೂವು ಬಿದ್ದಿದ್ದರೂ ಹಾವಿನ ಹಾಗೆ ಕಾಣುತ್ತದೆ. ಆದ್ದರಿಂದ ನಿನ್ನ ಹತ್ತಿರ ಮಾತನಾಡುವುದಕ್ಕೆ ಇಚ್ಛೆ ಇಲ್ಲ. ಬೇಗ ಮನೆಗೆ ಹೋಗು ಎಂದು ಹೇಳುತ್ತಿದ್ದಾನೆ. ಹಾಗೆ ಸಂಧಿಕಾಲದಲ್ಲಿ ನಾವು ಇದ್ದೇವೆ.

3–30 P. M.

ಶ್ರೀ ಎಸ್. ಬಂಗಾರಪ್ಪ.—ತಾವು ದಾನಶೂರ ಕರ್ಣ ಎನ್ನುವುದು ಅರ್ಥವಾಯಿತು.

ಶ್ರೀ ಡಿ. ದೇವರಾಜ ಅರಸ್.—ನನ್ನ ಜೊತೆ ಆ ಜನ್ಮದಲ್ಲಿ ನೀವೂ ಇದ್ದಿರಿ ಎಂದು ಆಯಿತು. ಆದುದರಿಂದ ಇದು ಎಂಥ ಸಂಧಿಕಾಲ ಎಂದರೆ ರಾಜಕೀಯ ಸಂಧಿಕಾಲ ಸಂಧ್ಯಾಕಾಲ ಎರಡೂ ಇದೆ. ಈ ಸಂಧಿಕಾಲದಲ್ಲಿ ಒಂದು ಅನುಮಾನ ಬರುವುದಕ್ಕೆ ಅವಕಾಶವಿದೆ. ನನಗೆ ತಿಳಿದಹಾಗೆ ಯಾವುದೂ ಮುಚ್ಚಿ ಇಡದೆ ಅನುಮಾನ ಪರಿಹರಿಸುವುದಕ್ಕೆ ನನ್ನ ಕೈಲಾದಷ್ಟು ಪ್ರಯತ್ನ ಮಾಡಿ ದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಈಗ ಮುಖ್ಯಮಂತ್ರಿಗಳು ಎರಡು ಕಾರಣ ಗಳಿಂದ ಈ ವಿಷಯವನ್ನು ನಾವು ನೋಡುವುದಕ್ಕೆ ಸಾಧ್ಯವಿದ್ದರೂ, ಕೂಡ ಮಾನವೀಯತೆ ದೃಷ್ಟಿ ಯಿಂದ ಸಹಾಯ ಮಾಡುವ ಆಧಾರ ಕೊಟ್ಟರು. ಕಾನೂನು ತೊಡಕು ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಾಜ್ಯಾಂಗಕ್ಕೆ ಆಗಿರುವ 25ನೇ ತಿದ್ದುಪಡಿ ಪ್ರಕಾರ ಮಾರ್ಕೆಟ್ ವ್ಯಾಲ್ಯೂ ಕೇಳುವುದಕ್ಕೆ ಕೋರ್ಟಿಗೆ ಹೋಗುವ ಹಾಗಿಲ್ಲ. ಸರ್ಕಾರ ನಿಗದಿ ಮಾಡುವ ಕಾಂಪೆನ್‌ಸೇಷನ್ ಮಾತ್ರ ಯಾವ ವ್ಯಕ್ತಿಯಿಂದ ಸ್ವತ್ತನ್ನು ಪಡೆಯುತ್ತೇವೆಯೋ ಆ ವ್ಯಕ್ತಿ ಕೇಳುವುದಕ್ಕೆ ಹಕ್ಕು ಇರು ತ್ತದೆ. ಈ ತೊಡಕು ಇರುವುದರಿಂದ ರಾಜ್ಯ ಸರ್ಕಾರದವರು ಮಹಾರಾಜರ ಆಸ್ತಿಯನ್ನು ಅಕ್ವೈರ್ ಮಾಡಿದಾಗ ಅವರು ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಇಲ್ಲದೆ ಇರುವುದರಿಂದ, ರಾಜ್ಯ ಸರ್ಕಾರ ವ್ಯಾಲ್ಯು ನಿಗದಿ ಮಾಡಬೇಕಾಗುತ್ತದೆಂದು ಹೇಳಿದರು. ಸಮತಾವಾದ ಹೇಳತಕ್ಕ ಜನ ತಾವು. ಈ ಸ್ವತ್ತು ಜನತಾ ಸ್ವತ್ತು ಆಗಿರುವುದರಿಂದ ಕೇಂದ್ರ ಸರ್ಕಾರದ ಜೊತೆಗೆ ಸಮಾಲೋಚನೆ ನಡೆಸಿ, ಪತ್ರವ್ಯವಹಾರ ನಡೆಸಿ ರಾಜ್ಯಾಂಗಕ್ಕೆ ಒಂದು ತಿದ್ದುಪಡಿ ತಂದು ಯಾವ ಪರಿಹಾರ ಕೊಡದೆ ಸ್ವತ್ತನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ವ್ಯವಹಾರದಲ್ಲಿ ನಡೆದಿರತಕ್ಕ ಎಲ್ಲಾ ವಿಚಾರಗಳನ್ನು ಸಭೆಯಮುಂದೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ತಿಳಿಸಿದರು. ನಾನಾದರೂ ಅವರ ವೈಯಕ್ತಿಕವಾದ ಸಂಬಂಧದ ಬಗ್ಗೆ ಮಾತನಾಡುವವನು ಅಲ್ಲ. ಈಗಲೂ ಅವರ ಬಗ್ಗೆ ಅಪಾರ ವಾದ ನಂಬಿಕೆಯನ್ನು ಇಟ್ಟುಕೊಂಡಿರುವವನು. ಆದರೆ ಒಂದು ಪ್ರಶ್ನೆ ಕಾಡುತ್ತಾ ಇದೆ. ಸೀಲಿಂಗ್ ಏನು ಹೇಳುತ್ತಾ ಇದ್ದೀರಿ, 2ಲಕ್ಷ ರೂಪಾಯಿ ಸೀಲಿಂಗ್ 10 ಸ್ಟ್ಯಾಂಡರ್ಡ್ ಎಕರೆ ಎಂದು ಏನು ಹೇಳುತ್ತಿದ್ದೀರಿ ಅಂಥ ಸಮಯದಲ್ಲಿ ಈ ರೀತಿ ಪ್ರಾಪರ್ಟಿಯನ್ನು ತಾವಾದರೂ, ಕೇಂದ್ರ ಸರ್ಕಾರದವರಾದರೂ ಕೂಡ, ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟು ಕೊಂಡುಕೊಳ್ಳ ತಕ್ಕದ್ದು ಸೀಲಿಂಗಿನ ಬುಡಕ್ಕೆ ಸಂಪೂರ್ಣವಾಗಿ ಕೊಡಲಿ ಏಟು ಹಾಕಿದ ಹಾಗಾಗುತ್ತದೆ. ದೊಡ್ಡ ಶ್ರೀಮಂತರುಗಳಿಗೆ ಮನೆಗಳು ಇವೆ, ಕೋಟ್ಯಾಂತರ ರೂಪಾಯಿ ಬಾಳತಕ್ಕ ಭಾರಿ ಭಾರಿ ಬಂಗಲೆ ಗಳು ಇವೆ. ಹಿಂದೆ ರಾಮಪ್ರಿಯ ಬಂಗಲೆ ಅಂಥ ಪ್ರಕರಣಗಳು ಬಂದಿವೆ. ನಿಮ್ಮ ಸೀಲಿಂಗ್‌ನ್ನು ಎರಡೂವರೆ ಲಕ್ಷ ಮಾಡುತ್ತೀರೆಂದು ಇಟ್ಟುಕೊಳ್ಳೋಣ. ಮಿಕ್ಕಿದ್ದನ್ನು ಬೇರೆಯವರಿಗೆ ಕೊಡಬೇಕು ಅಥವಾ ಹಂಚಬೇಕು ಎನ್ನುವುದು ನಮ್ಮ ನಿಮ್ಮ ತತ್ವವೆಂದು ತಿಳಿದುಕೊಂಡಿದ್ದೇನೆ. ಈಗ ತಾವು ಹೊರಟಿರತಕ್ಕ ರೀತಿಯಲ್ಲಿ ನೀವಾದರೂ ಕೊಂಡುಕೊಳ್ಳಿ, ಕೇಂದ್ರ ಸರ್ಕಾರದವರಾದರೂ ಕೊಂಡು ಕೊಳ್ಳಲಿ, ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಸ್ವತ್ತು ಎಷ್ಟು ಬೆಲೆ ಬಾಳುತ್ತದೋ ಅದು ಪರಿಹಾರ ಕೊಟ್ಟಂತಾಗುತ್ತದೆ. ಅಂದಾಗ ನಿಮ್ಮ ಸಮಾಜವಾದದ ತತ್ವಕ್ಕೆ ಅನುಗುಣವಾಗಿ ಸೀಲಿಂಗ್ ಏನು ಹಾಕುವುದಕ್ಕೆ ಹೊರಟಿದ್ದೀರಿ ಆ ತತ್ವಕ್ಕೆ ವಿರುದ್ಧವಾದ ಕ್ರಮವಾಗುತ್ತೆ. ಇದರಿಂದ ದೇಶದಲ್ಲಿ ಸಮಾಜವಾದಿ ಕಾರ್ಯಕ್ರಮಕ್ಕೆ ಒಳ್ಳೆಯ ಮಾರ್ಗವನ್ನು ಹಾಕಿದಂತಾಗುವು ದಿಲ್ಲ ಎನ್ನುವ ದೊಡ್ಡ ಅನುಮಾನ ನನ್ನನ್ನು ಇವೊತ್ತು ಕಾಡುತ್ತಾ ಇದೆ. ಸೀಲಿಂಗ್ 2ಲಕ್ಷ, 5 ಲಕ್ಷ, 5ಕೋಟಿ ತೀರ್ಮಾನಮಾಡಿದರೆ, ಮಿಕ್ಕದ್ದು ಆಸ್ತಿ ಯಾರಿಗೆ ಕೊಡಬೇಕು ? ಶ್ರೀಮಂತರಿಗೆ ಉಳಿಯಬೇಕೇ, ಮಹಾರಾಜರ ಆಸ್ತಿ ಅವರಿಗೆ ಉಳಿಯಬೇಕೇ ಯಾರಿಗೆ ಉಳಿಯಬೇಕು ಎನ್ನುವ ಪ್ರಶ್ನೆ ಬರುತ್ತದೆ. ಮಹಾರಾಜರ ಆಸ್ತಿ ಒಬ್ಬರ ಹತ್ತಿರ ಇಲ್ಲ. ಮಹಾರಾಜರ ಹೆಸರನ್ನು ಹೇಳಿ ಅನೇಕ ಮಾಜಿ ಮಂತ್ರಿಗಳು, ಮಾಜಿ ಎಂ.ಎಲ್.ಎ. ಗಳು ಮತ್ತು ಅನೇಕ ದೊಡ್ಡದೊಡ್ಡವರು ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಹಿಂದೆ ಬರೆಸಿಕೊಂಡಿರತಕ್ಕ ನಿದರ್ಶನ ಕಂಡಿದ್ದೇನೆ. ನಿಮ್ಮ ಬಗ್ಗೆ ಅಪಾರ ನಂಬಿಕೆ ಇಟ್ಟುಕೊಂಡಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಹೆಸರು ಗೊತ್ತಿದ್ದರೆ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಅದು ದೊಡ್ಡ ಕಾಂಟ್ರವರ್ಸಿಯಾಗುತ್ತದೆ. ಹಿಂದೆ ಇದ್ದ ಮಂತ್ರಿಗಳು, ಎಂ.ಎಲ್.ಎ. ಗಳು ಮಹಾರಾಜರಿಗಿಂತ ಹೆಚ್ಚಿನ ಆಸ್ತಿಯನ್ನು ಪಡೆದವರು ಇದ್ದಾರೆ. ಇವೊತ್ತು ದೇಶದಲ್ಲಿ ಮಕ್ಕಳ ಹೆಸರಿಗೆ, ದನಗಳ ಹೆಸರಿಗೆ ನಾಯಿ ಹೆಸರಿನಲ್ಲಿ ಮನೆಗಳನ್ನು ಹಂಚಿಕೆ ಮಾಡುತ್ತಿದ್ದಾರೆ. ಇವರು ಏನು ಆ ರೀತಿ ಹಂಚಿಕೆ ಮಾಡಿಲ್ಲ. ಇವರಿಗೆ ತೊಂದರೆ ಇದೆ ಎನ್ನತಕ್ಕದ್ದು ತಿಳಿದ ಮೇಲೆ, ನಾನು ವಾದ ವಿವಾದ ಮಾಡುವವನಲ್ಲ. ಇವರ ಬಗ್ಗೆ ಅಪಾರವಾದ ಗೌರವ ಇಟ್ಟು ಕೊಂಡಿರುವವನು. ನಿಮ್ಮ ಸಮತಾವಾದ ತತ್ವದಂತೆ ಆಗಸ್ಟ್ 15ನೇ ತಾರೀಖು ಕ್ರಾಂತಿಕಾರಕವಾದ ಕಾರ್ಯಕ್ರಮವನ್ನು ರಾಜ್ಯದಲ್ಲಿ ಹಾಕಬೇಕೆಂದು ಒಂದು ಕಾರ್ಯಕ್ರಮ ರಚನೆ ಮಾಡಿಕೊಂಡಿ ದ್ದೀರಿ. ಅವನ್ನೆಲ್ಲಾ ನಾವು ನೋಡುವಾಗ ಒಂದುಕಡೆ ಪ್ರಾಪರ್ಟಿ ಸೀಲಿಂಗ್ 2 ಲಕ್ಷ ಇರಬೇಕು ಎಂದು ಹೇಳುತ್ತೀರಿ, ದೆಹಲಿಯಲ್ಲಿ ಎಲ್ಲರಿಗಿಂತ ಮುಂಚಿತವಾಗಿ 10 ಸ್ಟ್ಯಾಂಡರ್ಡ್ ಎಕರೆ ಇರಬೇಕು ಎಂದು ಹೇಳಿದ್ದೀರಿ. ಒಂದುಕಡೆ ಆ ರೀತಿ ಹೇಳುತ್ತೀರಿ ಮತ್ತೊಂದು ಕಡೆ ಈ ರೀತಿ ಖರೀದಿಗೆ ಕೊಂಡು ಕೊಳ್ಳುವ ಧಾಟಿಯಲ್ಲಿ ಹೋಗುವುದಾದರೆ ನಿಮ್ಮ ತತ್ವದಲ್ಲಿ ಏನು ನಂಬಿಕೆ ಬರುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ಕೆಲವು ಸಂಶಯಗಳನ್ನು ನಿವಾರಣೆ ಮಾಡಿದ್ದೀರಿ. ಇನ್ನೊಂದು ಸಂಶಯ ನಿವಾರಣೆಯಾಗಬೇಕಾಗಿದೆ. ಇನ್‌ಏಲಿಯನಬಿಲಟಿ ಕ್ಲಾಸ್ ಏನು ಇದೆ ಅದನ್ನು ಓದಿದಿರಿ. ಮಾರಿಕೊಳ್ಳಬಹುದು ಎಂದು ಕೇಂದ್ರಸರ್ಕಾರದವರು ಹೇಳಿದ್ದಾರೆ. ಎರಡನೆಯ ಪ್ರಶ್ನೆ ವ್ಯಾಖ್ಯಾನ ಮಾಡಿದಿರಿ. 25ನೇ ಅಮೆಂಡ್‌ಮೆಂಟ್ ಮಾಡಿದ್ದರೂ ಸಹ ಪರಿಹಾರ ಕೊಡಲೇ ಕೂಡದು ಎಂದು ಏನೂ ಇಲ್ಲ. ಪರಿಹಾರ ಕೊಡಲೇ ಬೇಕಾಗುತ್ತದೆ, ಇದರ ಬಗ್ಗೆ ಶ್ರೀಮಾನ್ ಹನುಮಂ ತಯ್ಯನವರ ಹತ್ತಿರ ಚರ್ಚೆ ಮಾಡಿದ್ದೇನೆ'ನಮ್ಮ ಹತ್ತಿರ ಹಣವಿಲ್ಲ ಕೇಂದ್ರದವರು ಕೊಟ್ಟರೆ ಯೋಚನೆ ಮಾಡೋಣ ಎಂದು ತಾವು ಮಾತನಾಡುತ್ತಾ ಹೇಳಿದಿರಿ. ಇದರಲ್ಲಿ ಏನು ಅರ್ಥ ಬರುತ್ತೆದೆ? ಒಂದು ಪರಿಹಾರ ಕೊಡಬೇಕಾಗುತ್ತದೆಂದು ತೀರ್ಮಾನಕ್ಕೆ ಬಂದಿದ್ದೀರಿ. ನನ್ನ ಉತ್ತರ ಇಷ್ಟೇ. ಕಾಂಪೆನ್ಸೇಷನ್ ಕೊಡದೆಹೋದರೆ ಬಹಳ ಸಂತೋಷ ಅದು ನಮ್ಮ ಅಭಿಪ್ರಾಯ ಇದೆ. ಅದಕ್ಕೆ ಘಟನಾವಳಿಯಲ್ಲಿ ತಿದ್ದುಪಡಿಮಾಡಬೇಕು 25ನೇ ಅಮೆಂಡ್‌ಮೆಂಟ್‌ನಂತೆ ಹೋಗಬೇಕು. 25ನೇ ಅಮೆಂಡ್‌ಮೆಂಟ್ ಚೌಕಟ್ಟಿನೊಳಗೆ ಮಾರ್ಕೆಟ್‌ವ್ಯಾಲ್ಯೂ ಕೊಡಬೇಕಾಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಲ್ಲಿ ಹೇಳಿದ್ದೇನೆ? Why go on that assumption? I have never stated at any stage either now or previously that we are going to pay the market value.

ಶ್ರೀ ಎಂ ಎಸ್. ಕೃಷ್ಣನ್.—ನನ್ನ ಸೂಚನೆ ಏನು ಎಂದರೆ ಇವರಿಗೆ ಕೊಡುವುದನ್ನು ಕೊಡಬೇಕಾಗಿಲ್ಲ ಎಂದು ಹೇಳುವುದಾಗಲೀ ಇಲ್ಲವೇ ಕಡಿಮೆ ಮಾಡುವುದಾಗಲೀ ಅಲ್ಲ. ಇದರಲ್ಲಿ ಏನೋ ಒಂದು ರೀತಿಯ ಮೋಸವಾಗಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಸಾಮಾನ್ಯ ಜನರಿಗೆ ಯಾವ ರೀತಿ ಪರಿಹಾರಗಳನ್ನು ಸರಕಾರ ಕೊಡುತ್ತದೋ ಆ ರೀತಿ ಇವರ ವಿಚಾರದಲ್ಲೂ ಪರಿಶೀಲನೆ ಮಾಡಬೇಕು. ಈಗಿರುವ ಮಹಾರಾಜರು ಅವರು ಸುಖವಾಗಿ ಜೀವನ ಮಾಡುವುದಕ್ಕೆ ಬೇಕಾದಷ್ಟು ಇದೆ, ಅವರ ಮಕ್ಕಳು ಹಾಗೂ ಮೊಮ್ಮಕ್ಕಳು ಇರುವವರೆಗೂ ಜೀವನ ಮಾಡುವುದಕ್ಕೆ ತಕ್ಕ ಶಕ್ತಿ ಇದೆ, ಅದು ನನಗೆ ಗೊತ್ತು. ಹೀಗಿರಬೇಕಾದರೆ ಪರಿಹಾರ ಕೊಡಬೇಕಾದರೆ ಜನಸಾಮಾನ್ಯರಿಗೆ ಯಾವ ರೀತಿಯಾಗಿ ಪರಿಹಾರ ಕೊಡಬೇಕೋ ಆ ರೀತಿ ಇಲ್ಲೂ ಯೋಚನೆ ಮಾಡುವುದಕ್ಕೆ ಅವಕಾಶವಿದೆ, ಈ ದೃಷ್ಟಿಯಲ್ಲಿ ಸರಕಾರ ಗಮನ ಕೊಡಬೇಕು, ಇವರಿಗೆ ಪರಿಹಾರ ಕೊಡಬೇಕೆಂದರೆ ನಮ್ಮಲ್ಲಿ ಹಣವಿಲ್ಲ ಕೇಂದ್ರ ಸರಕಾರದವರು ಕೊಟ್ಟರೆ ಆಗ ನಾವು ಕೊಡಬಹುದು ಎಂದು ಹೇಳುತ್ತಾರೆ. ಇವೊತ್ತು ಕೇಂದ್ರದಲ್ಲಿ ಶ್ರೀಮಾನ್ ಹನುಮಂತಯ್ಯನವರು ಮಂತ್ರಿಗಳಾಗಿರಬಹುದು. ನಾಳೆ ಅವರು ಮಂತ್ರಿಗಳಾಗಿರುತ್ತಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಕೊನೆಗೆ ಇದು ನಮ್ಮ ಸರಕಾರದ ತಲೆ ಮೇಲೆ ಹೊರೆ ಬೀಳುವಂತೆ ಮಾಡಲು ಹೋಗಬೇಡಿ ಇಂತಹ ವ್ಯವಹಾರಕ್ಕೆ ಖಂಡಿತ ಅವಕಾಶ ಮಾಡಿಕೊಡಕೂಡದು ಎಂದು ತಮ್ಮಲ್ಲಿ ನಾನು ಹೇಳುತ್ತೇನೆ.

Sri K. PUTTASWAMY (Chamundeshwari).—Madam Speaker, while thanking the Chief Minister for making full disclosure of the development leading to a stage where the Government of India now can take a decision, I would like to state one point, which, according to me is fundamentally a legal point.

We all know that prior to 1947 the rulers of native States did not enjoy full powers of sovereignty, sovereignty vested in the paramount power. On 15th August 1947 the paramountcy lapsed and on the lapsing of paramount power the rulers of the native States became full sovereign. They continued for some time like that till the Maharaja entered into an agreement for merger of Mysore with the Indian Union. If we go back to that period the merger agreement was accession treaty or whatever we may call it, is a document between two sovereigns, the Maharaja of Mysore entered into a merger treaty in his capacity as a overeign. In 1950 when the Treaty came into existence, what was the position? At a time when the Maharaja enjoyed constitutionally the full sovereign powers and the private property list was prepared, it was agreed between the Maharaja who was then fully sovereign and the Indian Union that the concurrence of Mysore Government has to be obtained. In the correspondence this phrase is found. Then also the Mysore Government has concurred and with the concurrence of the Mysore Government a private property list was prepared. At that time the Government of India was not, according to me, prepared to give enlarged powers of ownership for these three Palaces. Powers of ownership were limited only to right of residence. Now, the sovereign powers of Maharaja were taken out and it was merged in the Indian Union. I concede that it is not open to the Government of India to take a final decison. But, I submit in all humility, that the concurrence or opinion of the Government is a very very relevant factor. I do not think the Government of India would take a decision if the Mysore

(SRI K. PUTTASWAMY)

Government does not concur with their opinion. That is my reading. After having listened to the hon. Chief Minister I am surprised that the Indian Union which was not prepared to give enlarged powers over these three palaces would now, at a time when the thinking of the country has changed, think of enlarging the powers of ownership. I take it that the accession treaty and the private property list is not governed by the ordinary law. It is not under any law that this agreement has been entered into. It is clear for all of us that under the Transfer of Property Act the condition of inalienability is void *ab initio*. Condition is valid and condition of inalienability is void *ab initio*. Therefore such an agreement could not have held ground if it were in accordance with any law. This agreement is above law in the exercise of powers of sovereign powers of the two contracting parties and it so happens that one of the contracting parties has ceased to enjoy sovereign powers. All these sovereign powers are now vested in the Indian Union and the Indian Union, while conceding that it has the right to take a decision finally, I would humbly submit to this House that it is the legitimate duty of the Government of Mysore to point out to the Government of Ind a the changed circumstances and also to bring to their notice that the 1950 treaty which contains the clause of inalienability cannot be changed now.

This is the point which I would like the Hon. Chief Minister to kindly consider, ponder over and if necessary consult the Law Department and if he finds that there is any force in this, he might kindly bring it to the notice of the Government of India.

ಶ್ರೀ ಡಿ. ದೇವರಾಜ ಅರಸ್.—ಈಗ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಮತ್ತು ಶ್ರೀಮಾನ್ ಕೃಷ್ಣನ್ ಅವರು ಆಸ್ತಿಯ ವಿಚಾರದಲ್ಲಿ ಸೀಲಿಂಗ್ ಲಿಮಿಟ್ ಹಾಕಬೇಕೆಂದು ಏನು ಹೇಳಿದರು, ಆ ವಿಚಾರದಲ್ಲಿ ನಾವು ಈಗಾಗಲೇ ಒಪ್ಪಿಕೊಂಡು ಕಾನೂನು ಮಾಡುವುದಕ್ಕೆ ಹೊರಟಿದ್ದೇವೆ. ಅದರಂತೆ ಲ್ಯಾಂಡ್ ಸೀಲಿಂಗನ್ನು ಸಹ ಕಡಿಮೆ ಮಾಡುವುದಕ್ಕೆ ಹೊರಟಿದ್ದೇವೆ. ಆ ರೀತಿ ಕಾನೂನು ಮಾಡಿದ ಮೇಲೆ, ಅದು ಮಹಾರಾಜರ ಆಸ್ತಿಗೂ ಸಹ ಅನ್ವಯವಾಗಲೇ ಬೇಕು. ಆಸ್ತಿಯ ಮೇಲೆ ಸೀಲಿಂಗ್ ಹಾಕಿದಾಗ ಅವರ ಆಸ್ತಿಯು ಸಹ ಹೋಗಬೇಕು. ಅವರಿಗಾಗಿಯೇ ಸ್ಪೆಷಲ್ ಆಗಿ ಕಾನೂನು ಮಾಡುವ ಪ್ರಶ್ನೆಯೇ ಉಳಿದಿಲ್ಲ. ಅವರ ಹತ್ತಿರ 500 ಎಕರೆ ಇರಲಿ, 10 ಎಕರೆ ಇರಲಿ, ನಾವು ಸೀಲಿಂಗ್ ಹಾಕಿದಾಗ, ಅದು ಅವರಿಗೂ ಸಹ ಅನ್ವಯವಾಗುತ್ತದೆ. ಈ ರೀತಿ ಸೀಲಿಂಗ್ ಹಾಕುವ ವಿಚಾರ ಇರುವಾಗ ಅವರ ಆಸ್ತಿಯನ್ನು ಏತಕ್ಕೆ ಕೊಂಡುಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಪ್ರಶ್ನೆ ಹಾಕುತ್ತಿದ್ದಾರೆ. ಮತ್ತು ಕಾಂಪೆನ್‌ಸೇಷನ್ ಏತಕ್ಕೆ ಕೊಡಬೇಕು, ಆ ರೀತಿ ಕೊಡಬೇಕಾಗಿದ್ದರೆ ಈಗಿರುವ ಕಾನೂನನ್ನೇ ತಿದ್ದುಪಡಿ ಮಾಡಿ ಎಂಬುದಾಗಿ ಸಹ ಅವರು ಹೇಳಿದರು. ಅರಮನೆಯನ್ನು ಕೊಂಡುಕೊಳ್ಳಬೇಕೆಂದು ಹೋದವನು ನಾನಲ್ಲ. ಅದನ್ನು ಗಾರ್ಡನ್ ಆಗಿ ಮಾಡಬೇಕು ಎಂದು ಹೇಳಿದಾಗ ಆ ಪ್ರಶ್ನೆ ಬರುತ್ತದೆ. ನಾಳೆ ಕಾನೂನು ಜಾರಿಯಲ್ಲಿ ಬಂದಾಗ ಅದು ಅವರಿಗೂ ಸಹ ಅನ್ವಯವಾಗುತ್ತದೆ. ಶ್ರೀಮಾನ್ ಹನುಮಂತಯ್ಯನವರು ಇಲ್ಲಿಗೆ ಬಂದಾಗ ಅದನ್ನು ಗಾರ್ಡನ್ ಮಾಡುವುದು ಒಳ್ಳೆಯದು ಎಂಬ ಸಲಹೆಯನ್ನು ಅವರ ಮುಂದೆ ಇಟ್ಟಾಗ ಅವರು ಕೇಂದ್ರ ಸರ್ಕಾರದವರ ಹತ್ತಿರ ಕೇಳುತ್ತೇನೆ ಎಂದು ಹೇಳಿದ್ದಾರೆ. ನಾಳೆ ಸೀಲಿಂಗ್ ಲಿಮಿಟ್ ಬಗ್ಗೆ ಬಿಲ್ ಬಂದಾಗ, ಈ ಆಸ್ತಿಯನ್ನು ಎಗ್ಜೆಮ್ಟ್ ಮಾಡಿ ಎಂದರೆ ಆಗ ನಮ್ಮದು ತಪ್ಪಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಸೀಲಿಂಗ್ ಲಿಮಿಟ್ ತರುವುದರೊಳಗೆ ಅವರು ಬೇರೆಯವರಿಗೆ ಮಾರಿದರೆ ಏನು ಮಾಡುತ್ತೀರಿ ?

Sri D. DEVARAJ URS.—He is also an ordinary citizen, even if X, Y or Z buys it he runs the risk.

ಶ್ರೀ ಎಸ್. ಬಂಗಾರಪ್ಪ.—ಚಿಲ್ಲರೆ ಚಿಲ್ಲರೆಯಾಗಿ ಸೈಟ್‌ಗಳನ್ನಾಗಿ ಮಾಡಿ ಮಾರಾಟ ಮಾಡಿದರೆ ಏನು ಮಾಡುತ್ತೀರಿ?

Sri D. DEVARAJ URS.—Even if he were to sell what all he has and get money it will have to be given back to the Government by way of capital-gains tax.

Sri C. M. ARUMUGAM.—May I know whether the land reforms Act was applicable to the Maharaja of Mysore or was he exempted?

Sri D. DEVARAJ URS.—As far as my knowledge goes he has not been exempted.

Sri C. M. ARUMUGAM.—Till such time you bring in Urban ceilings will you issue an ordinance that no person including the Maharaja should sell their properties?

Sri D. DEVARAJ URS.—At the conference of all State Chief Ministers held recently at Delhi we discussed this particular point, along with the socialisation of the urban property.

ಶ್ರೀ ಎಸ್. ಬಂಗಾರಪ್ಪ.—ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಪ್ರಶ್ನೆಗೆ ಉತ್ತರವನ್ನು ಯಕ್ಷ ಬಂದು ಕೊಡಬೇಕು. ನನ್ನ ಕೈಯಿಂದ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದಷ್ಟು ಜಾಗ್ರತೆ ಸೀಲಿಂಗ್ ಲಿಮಿಟ್ ತಂದು ಹೆಚ್ಚಿನ ಆಸ್ತಿಯನ್ನು ಪರಿಹಾರ ಕೊಡದೆ ವಶಪಡಿಸಿಕೊಳ್ಳುವುದಕ್ಕೆ ಪ್ರಯತ್ನವನ್ನು ಏತಕ್ಕೆ ಮಾಡಬಾರದು?

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ರಾಜ್ಯ ಬಂದಾಗ ಆ ರೀತಿ ಮಾಡುವಿರಂತೆ, ಈಗ ಸುಮ್ಮನೆ ಇರಿ.

ಶ್ರೀ ಎಸ್. ಬಂಗಾರಪ್ಪ.—ನಾವು ಹೊಸ ಪಕ್ಷವನ್ನು ರಚನೆ ಮಾಡಿದ್ದೇವೆ. ನೀವೆಲ್ಲಾ ಬಂದು ಸೇರಿಕೊಂಡರೆ ಹೊಸ ರಾಜ್ಯ ಸ್ಥಾಪನೆ ಮಾಡಬಹುದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಕೃಷ್ಣನ್ ಅವರು ಹೇಳಿದಂತೆ ಕಾಂಪೆನ್‌ಸೇಷನ್ ಕಡಿಮೆ ಕೊಡಲಿ ಅಥವಾ ಜಾಸ್ತಿ ಕೊಡಲಿ, ಅದಕ್ಕೆ ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕಾಗಿದ್ದರೆ ಮಾಡಲಿ.

ಶ್ರೀ ಡಿ. ದೇವರಾಜ ಅರಸ್.—ಅದು ನನ್ನ ಒಬ್ಬನ ಕೈಯಲ್ಲಿ ಇಲ್ಲ. ಅದನ್ನು ಕೇಂದ್ರ ಸರ್ಕಾರದವರು ಮಾಡಬೇಕು. ಮಾನ್ಯ ಪುಟ್ಟಸ್ವಾಮಿಯವರು ಹೇಳಿದ ಹಾಗೆ ಈ ವಿಷಯ ವಿಶೇಷವಾದ ಕಾನೂನಿನಲ್ಲಿ ಒಳಪಡುತ್ತದೆ ಎಂಬ ವಿಷಯ ನನಗೆ ಗೊತ್ತಿಲ್ಲ. ಅವರು ಲಾಯರ್ ಇರುವುದರಿಂದ ಅವರಿಗೆ ಹೆಚ್ಚು ಗೊತ್ತಿರಬೇಕು. ನಾನು ಲಾಯರ್ ಕೆಲಸ ಮಾಡಿಲ್ಲ. ಅವರು ಒಂದು ವಿಷಯವನ್ನು ನನಗೆ ಸಹಾಯಕವಾಗಿ ಹೇಳಿದರು. ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಬಗ್ಗೆ ಅವರು ಹೇಳಿದರು. Condition of inalienability becomes meaningless under the Transfer of Properties Act, ಎಂದು. Another point he made was that this property cannot be treated as property under the Transfer of property Act. That is a matter which should be examined or to ask the Government of India to examine it. That is what he stated. ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಇದಕ್ಕೂ ಅನ್ವಯವಾಗುವುದಾದರೆ, ಅದು ಮೀನಿಂಗ್‌ಲೆಸ್ ಆಗುತ್ತದೆ ಎಂಬ ವಿಷಯವನ್ನು ಹಿಂದೆ ಕೂಡ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದಾರೆ. ಆದರೂ ಕೂಡ ಕೇಂದ್ರ ಸರ್ಕಾರದವರು ಈ ಒಂದು ತೀರ್ಮಾನಕ್ಕೆ ಬಂದಿದ್ದಾರೆ.

(ಶ್ರೀ ಡಿ. ದೇವರಾಜ ಅರಸ್)

ಮತ್ತೆ ಬೇಕಾದರೆ ಕೇಂದ್ರ ಸರ್ಕಾರಕ್ಕೆ ತಿಳಿಸೋಣ. ಈಗ ಕೇಂದ್ರ ಸರ್ಕಾರದವರು ತಮ್ಮ ಒಪಿನಿಯನ್ ತಿಳಿಸಿದ್ದಾರೆ ಮತ್ತು ಡಿಸೈಡೆಡ್ ಎಂದು ಅವರು ಹೇಳಿದ್ದಾರೆ. ಅಂದರೆ ಆರ್ಡಿನರಿ ಲಾ ಇದಕ್ಕೂ ಅಪ್ಲೈ ಆಗುತ್ತದೆ ಎಂದು ತಿಳಿದುಕೊಂಡೇ ಅವರು ಈ ಒಂದು ತೀರ್ಮಾನಕ್ಕೆ ಬಂದಿದ್ದಾರೆಂದು ನನ್ನ ಅಭಿಪ್ರಾಯವಾಗಿದೆ.

ಅಧ್ಯಕ್ಷರು.—ಈಗ ಮತ್ತೆ ಕ್ಲಾರಿಫಿಕೇಷನ್ ಕೇಳಬೇಕಾದ ಅಗತ್ಯವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಎಲ್ಲ ವಿವರಗಳನ್ನು ಸಹ ತಿಳಿಸಿದ್ದಾರೆ. I don't think there is need to revise my decision. I therefore disallow the adjournment motion.

Sri H. S. SIDDAPPA.—I have a very important matter to bring to the notice of this House. There is a paper called "KALAMANA" in which it is stated that :

"ಹರಿಜನೋದ್ಧಾರ, ಹಿಂದೂ ಸಂಪ್ರದಾಯ ವಿರುದ್ಧ?" ಎಂಬ ಬಗ್ಗೆ ವಿವರಣೆ ಕೊಡಲಾಗಿದೆ. ಮತ್ತು ಇವರೇ ನಿಮ್ಮ ಮೂಲ ಜನ್ಮದಾತರು ಎಂಬ ಬಗ್ಗೆ ಸಹ ವಿವರಣೆ ಕೊಡಲಾಗಿದೆ. ಜಾತ್ಯತೀತ ಸಮಾಜ ಸ್ಥಾಪನೆ ಆಗಬೇಕು ಎಂದು ಈ ಸರ್ಕಾರ ಹೇಳುತ್ತಿರುವಾಗ ಇಂತಹ ಒಂದು ಪತ್ರಿಕೆಯನ್ನು ಬೆಂಗಳೂರಿನಲ್ಲಿ ಅಚ್ಚು ಹಾಕಲು ಅವಕಾಶ ಕೊಟ್ಟವರು ಯಾರು ಎಂದು ಕೇಳುತ್ತೇನೆ. ಹರಿಜನರ ಸಂಪ್ರದಾಯಕ್ಕೆ ವಿರುದ್ಧವಾಗಿ ಈ ಪತ್ರಿಕೆಯನ್ನು ಅಚ್ಚು ಮಾಡಲಾಗಿದೆ. ಜಾತಿಯ ವರ್ಣನೆಯನ್ನು ಕೊಡುತ್ತಾ "ಚಂಡಾಲ" ಎಂಬ ಬಗ್ಗೆ ಈ ರೀತಿ ಹೇಳಲಾಗಿದೆ :

> "ಬ್ರಾಹ್ಮಣ ಸ್ತ್ರೀಯಲ್ಲಿ ಶೂದ್ರವೀರ್ಯದಿಂದ ಹುಟ್ಟಿದವನು ಚಂಡಾಲನೆನಿಸುವನು ಇವನು ಅಪಾತ್ರನು ಯಾವುದೊಂದು ಪಾತ್ರವು ಇವನಿಗಿಲ್ಲವೋ ಇಂಥವರಿಗೆ ಕತ್ತೆಯೇ ಧನವು ಆಸ್ತಿಯು. ಇಂಥವನ ಸ್ಪರ್ಶ ಮಾಡುವುದು ನಿಷಿದ್ಧವು ಇವರನ್ನು ಮುಟ್ಟಿದರೆ ಉಟ್ಟ ಬಟ್ಟೆ ಸಹಿ ಸ್ನಾನವನ್ನು ಮಾಡಬೇಕು" ಎಂಬುದಾಗಿ.

ಅಧ್ಯಕ್ಷರು.—ಆ ಪತ್ರಿಕೆಯಲ್ಲಿ ಬಂದಿರುವ ವಿಷಯಕ್ಕೂ ಈ ಸಭೆಗೂ ಯಾವ ಸಂಬಂಧವೂ ಇಲ್ಲ, ತಾವು ದಯವಿಟ್ಟು ಕುಳಿತುಕೊಳ್ಳಿ. ಮುಂದಿನ ವಿಷಯಕ್ಕೆ ನಾವು ಹೋಗೋಣ.

Sri H. S. SIDDAPPA.—My point is that this paper should be taken to task ; the persons who are responsible to publish this paper should be taken to task. ರಾಷ್ಟ್ರದಹಿತವನ್ನು ಕಾಪಾಡುವುದಕ್ಕಾಗಿಯೇ ಈ ಸಭೆ ಇರುವುದು. ಜಾತ್ಯಾತೀತ ರಾಜ್ಯವನ್ನು ಸ್ಥಾಪನೆ ಮಾಡಬೇಕೆಂದು ನಾವು ಹೊರಟಿರುವಾಗ ಇಂತಹ ಪತ್ರಿಕೆಯನ್ನು ಅಚ್ಚು ಹಾಕುವುದಕ್ಕೆ ಅವಕಾಶ ಕೊಡುವುದು ಸರಿಯಲ್ಲ. ಇದೇ ಪತ್ರಿಕೆಯಲ್ಲಿ ಲಿಂಗಾಯತ ಎಂಬುದಕ್ಕೆ ಈ ಅರ್ಥ ಕೊಡಲಾಗಿದೆ :

> "ವ್ರಾತ್ಯ ವೈಶ್ಯನ ದೆಸೆಯಿಂದ ವ್ಯಭಿಚಾರಿಣಿ ವೈಶ್ಯ ಸ್ತ್ರೀಯಲ್ಲಿ ಲಿಂಗಾಯತನೆಂಬ ಪುತ್ರನು ಉತ್ಪನ್ನನಾಗುತ್ತಾನೆ. ಈತನು ಹಣೆಯಲ್ಲಿ ವಿಭೂತಿಯನ್ನು ಧರಿಸಿ, ಗಳದಲ್ಲಿ ಲಿಂಗವನ್ನು ಕಟ್ಟಿಕೊಂಡು ಪೂಜಿಸುತ್ತಾನೆ. ವಸ್ತ್ರ, ಕರೀಮೆಣಸು, ಹಿಂಗು ಇತ್ಯಾದಿಗಳನ್ನು ಮಾರಿ ಜೀವಿಸುತ್ತಾನೆ,"

ಎಂಬುದಾಗಿ. ಇಂತಹ ಪತ್ರಿಕೆ ರಾಜ್ಯದ ಹಿತವನ್ನು ಕಾಪಾಡುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅರಸು ಎಂದರೆ ಏನು ಎಂಬ ಬಗ್ಗೆ ಏನಾದರು ಅದರಲ್ಲಿ ಇದೆಯೇ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಪತ್ರಿಕೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಈ ಪತ್ರಿಕೆಯ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಕ್ರಮ ತೆಗೆದು ಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಹೊಸದಾಗಿ ಈ ಸಭೆಗೆ ಬಂದಿರತಕ್ಕ ಮಾನ್ಯ ಸದಸ್ಯರು ದಯಮಾಡಿ ರೂಲ್ಸ್‌ನ್ನು ಸರಿಯಾಗಿ ಓದಿಕೊಳ್ಳಬೇಕು.

4-00 P. M.

ತಾವು ಮೊದಲೇ ನೋಟೀಸ್ ಕೊಡದೆ ಸುಮ್ಮನೆ ಹೀಗೆ ವಿಚಾರಗಳನ್ನು ಎತ್ತಿದರೆ ಹೇಗೆ?

ಶ್ರೀ ಎಚ್. ಎಸ್. ಸಿದ್ದಪ್ಪ.—ಇದು ಬಹಳ ಮುಖ್ಯವಾದದ್ದು, ಇದರ ಅರ್ಜೆನ್ಸಿ ಬಹಳವಾಗಿ ಇತ್ತು. ನಮ್ಮ ರಾಜ್ಯದ ಮುಖ್ಯ ನ್ಯಾಯಾಧೀಶರು ಈ ಪತ್ರಿಕೆಯಲ್ಲಿರತಕ್ಕ ವಿಷಯಗಳಿಗೆ ಸಂಬಂಧಪಟ್ಟ ಒಂದು ಪುಸ್ತಕವನ್ನು ಬಿಡುಗಡೆ ಮಾಡಿದ್ದಾರೆ.

ಅಧ್ಯಕ್ಷರು.—ಎಲ್ಲಕ್ಕಿಂತ ಮುಖ್ಯವಾಗಿ ಈಗ ನಮ್ಮ ಮುಂದಿರುವ ಈ ಸಭೆಯ ಕಾರ್ಯಕಲಾಪಕ್ಕೆ ಹೆಚ್ಚಿನ ಗಮನ ಕೊಡಬೇಕು. ಆದ್ದರಿಂದ ನಾವು ಇನ್ನು ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಹೆಸರು ಹೇಳಿ ನಮ್ಮ ದೇಶಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ಅವರು ಕೊಟ್ಟಂತಹ ಹೇಳಿಕೆ, ಅವರು ತೆಗೆದುಕೊಂಡ ನಿಲುವು ಸಮಾಜವಾದ ನೀತಿಗೆ ವಿರೋಧವಾಗಿದೆ. ಆದ್ದರಿಂದ ನಾನು ಇದರ ಬಗ್ಗೆ ಪ್ರತಿಭಟನೆ ಸೂಚಿಸಲು ಸಭಾ ತ್ಯಾಗ ಮಾಡುತ್ತೇನೆ.

[Sri S. Bangarappa withdrew from the House]

Sri C. M. ARUMUGAM.—We are concerned with our Adjournment Motion. Of course, the Chief Minister replied and gave us certain information. If you could kindly give us enough time, we can high light the discussion and we will show how it is important.

MADAM SPEAKER.—I have already decided and I have not given my permission.

ಶ್ರೀ ವಾಟಾಳ್ ನಾಗರಾಜ್.—ನಾನು ಮತ್ತು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಇನ್ನೊಬ್ಬರು ಮಿತ್ರರು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ಪತ್ರಿಕೆಯಲ್ಲಿದ್ದ ವಿಚಾರವನ್ನು ಹೇಳಿದ್ದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡಲಿಲ್ಲ.

Sri D. DEVARAJ URS (Chief Minister).—I have taken note of it and I will get it verified immediately.

First Report of the Committee on Private Members' Bills and Resolutions

Presentation

Sri B. P. KADAM (Deputy Speaker).—I present the First Report of the Committee on Private Members' Bills and Resolutions.

MADAM SPEAKER.—Report is presented.

Sri D. B. KALMANKAR.—I move "that this Assembly agrees with the First Report of the Committee on Private Members' Bills and Resolutions."

The motion was adopted